ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

17 ಸೆಪ್ಟೆಂಬರ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -186 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629




ಭಾರತ ಕ್ರಿಕೆಟ್ ತಂಡದ ಆಟಗಾರ ರಿಂಕು ಸಿಂಗ್ ಅವರು ಸಮಾಜವಾದಿ ಪಕ್ಷದ ಸಂಸದೆ ಪ್ರಿಯಾ ಸರೋಜ್ ಅವರೊಂದಿಗೆ ಡಿಸೆಂಬರ್ 4ರಂದು ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ.



ಗಣಪನ ಮೂರ್ತಿ ಹಿಂದಿನ ಮಾರುಕಟ್ಟೆ ಸೈಕಾಲಜಿ ! » 2


ಕೆಲಸ ಮಾಡದಿದ್ರೆ ನಿರ್ದಾಕ್ಷಿಣ್ಯವಾಗಿ ಅಮಾನತು 3


ಕ್ರೀಡಾಂಗಣಗಳ ಅಭಿವೃದ್ಧಿಗೆ 100 ಕೋ.ರೂ.ಮೀಸಲಿಡಲು ಒತ್ತಾಯ » 4


# ಯುಪಿಐ ಶುಲ್ಕ: ಟ್ರಂಪ್ ಮುಂದೆ ಶರಣಾಗಬೇಡಿ

- ಪ್ರಧಾನಿ ಮೋದಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ
- ಎಂಡಿಆರ್ ಕಟ್ಟುಪಾಡು ಹಿಂಪಡೆಯಲು ಆಗ್ರಹ

• ಪ್ರಜೋದಯ ವರದಿ

**ನವದೆಹಲಿ:** ಯುಪಿಐ ವಹಿವಾಟುಗಳ ಮೇಲಿನ ಹೊಸ ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಕಟ್ಟುಪಾಡುಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಾಗ್ದಾಳಿ ನಡೆಸಿದ್ದಾರೆ.

ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಮೂಲಕ 2,000ಕ್ಕಿಂತ ಹೆಚ್ಚಿನ ವ್ಯವಹಾರ ನಡೆಸುವ ಪ್ರತಿ ವಹಿವಾಟಿಗೆ ಶೇ.0.4 ರಷ್ಟು ಎಂಡಿಆರ್ ಶುಲ್ಕ ವಿಧಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಇದಕ್ಕೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ದೀರ್ಘದಂಡ ನಮಸ್ಕಾರ ಮಾಡಲು ನಿರ್ಧರಿಸಿದ್ದಾರೆ. ಕೇಂದ್ರ ಸರ್ಕಾರವು ಭಾರೀ ಪ್ರಮಾಣದ ಹಣ ಅಮೇರಿಕಾಕ್ಕೆ ಹರಿದುಹೋಗುವಂತೆ. ಅಮೇರಿಕಾದ ಎದುರು ದೀರ್ಘದಂಡ ನಮಸ್ಕಾರ ಮಾಡುವುದನ್ನು ನಿಲ್ಲಿಸಿ. ನಿಮಗೆ ಬೆನ್ನುಮೂಳೆ ಇದೆ. ಎದ್ದು ನಿಲ್ಲಿ. ಯುಪಿಐ ಮೇಲೆ ಶುಲ್ಕ ವಿಧಿಸುವ ನಿರ್ಧಾರವನ್ನು ಹಿಂಪಡೆಯಿರಿ ಎಂದು ಆಗ್ರಹಿಸಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ವಿಚಾರ ಪ್ರಸ್ತಾಪಿಸಿರುವ ರಾಹುಲ್, ಇಂದಿರಾ ಅವರನ್ನು ಹಿಂದೊಮ್ಮೆ ನೀವು ಯಾವ ಕಡೆ ವಾಲುತ್ತೀರಿ? ಎಡಕ್ಕೋ? ಬಲಕ್ಕೋ ಎಂದು ಕೇಳಲಾಗಿತ್ತು. ಆಗ ಅವರು, ನಾನು ಎಡಕ್ಕೂ ವಾಲುವುದಿಲ್ಲ, ಬಲಕ್ಕೂ ವಾಲುವುದಿಲ್ಲ. ನೇರವಾಗಿ ನಿಲ್ಲುತ್ತೇನೆ ಎಂದಿದ್ದರು. ಮೋದಿ ಅದಕ್ಕೆ ಸಂಪೂರ್ಣ ಭಿನ್ನವಾಗಿದ್ದಾರೆ. ಅವರ ಎಡವೂ ಅಲ್ಲ, ಬಲವೂ ಅಲ್ಲ. ಡೊನಾಲ್ಡ್ ಟ್ರಂಪ್ ಎದುರು ನೇರವಾಗಿ ಮಲಗಿ ನಮಸ್ಕರಿಸಲು ನಿರ್ಧರಿಸಿದ್ದಾರೆಂದು ಟೀಕಿಸಿದ್ದಾರೆ.

**ಖರ್ಗೆ ಅಸಮಾಧಾನ**

ಮೋದಿ ಸರ್ಕಾರದ ಲೂಟಿ ಈಗ ಯುಪಿಐಗೂ ತಲುಪಿದೆ. ಯುಪಿಐ ಮೇಲೆ ಯಾವುದೇ ಶುಲ್ಕವಿಲ್ಲ ಎಂಬ ಸ್ಥಿತಿಯನ್ನು ಬದಲಾಯಿಸಿ, 2,000 ರೂ.ವರೆಗಿನ ಯುಪಿಐ ವಹಿವಾಟುಗಳಿಗೆ ಮಾತ್ರ ಶುಲ್ಕವಿಲ್ಲ ಎಂದು ಮಾಡಲಾಗಿದೆ. ಗಗನಕ್ಕೇರಿರುವ ಹಣದುಬ್ಬರವು ಈಗಾಗಲೇ ಸಾಮಾನ್ಯ ಮನುಷ್ಯನ ಜೇಬನ್ನು ಖಾಲಿ ಮಾಡಿದೆ. ಸಗಟು ಹಣದುಬ್ಬರವು ಶೇ.10 ರ ಹತ್ತಿರದಲ್ಲಿದೆ. ಇದರ ನಡುವೆ ಜನರ ಉಳಿದಿರುವ ಅಲ್ಪಸ್ವಲ್ಪ ಉಳಿತಾಯವನ್ನೂ ನಾಶಮಾಡುವ ಉದ್ದೇಶದಿಂದ ಬಿಜೆಪಿ ಸರ್ಕಾರವು ಸಾರ್ವಜನಿಕರ ಮೇಲೆ ಡಿಜಿಟಲ್ ಪಾವತಿ ತೆರಿಗೆಯನ್ನು ವಿಧಿಸಲು ಯೋಜಿಸಿದೆ ಎಂದು ರಾಜ್ಯಸಭೆ ಪ್ರತಿಪಕ್ಷ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ತರಾಟೆಗೆ ತೆಗೆದುಕೊಂಡಿದ್ದಾರೆ.

**ವಿಪಕ್ಷಗಳ ಹೇಳಿಕೆ ತಿರಸ್ಕರಿಸಿದ ಸರ್ಕಾರ**

ಯುಪಿಐ ಪಾವತಿಗಳ ಮೇಲೆ ವ್ಯಾಪಾರಿ ರಿಯಾಯಿತಿ ದರ (ಎಂಡಿಆರ್) ಪರಿಚಯಿಸುವಿಕೆಯು ವಿದೇಶಿ ಪ್ರಭಾವದಿಂದ ಕೂಡಿದೆ ಎಂಬ ವಿಪಕ್ಷಗಳ ಹೇಳಿಕೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ.

ಹಣಕಾಸು ಸಚಿವಾಲಯವು ಭಾರತದ ಯುಪಿಐ ನೀತಿ ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲಾಗಿದೆ ಮತ್ತು ಅದು ಗ್ರಾಹಕರಿಗೆ ಮುಕ್ತವಾಗಿ ಮುಂದುವರಿಯುತ್ತದೆ. ಯುಪಿಐ ವಹಿವಾಟಿನ ಮೇಲಿನ ಎಂಡಿಆರ್ ವಿದೇಶಿ ಪ್ರಭಾವದಿಂದಾಗಿದೆ ಎಂದು ಹೇಳಲಾಗಿದೆ. ಆದರೆ, ಇದು ಸುಳ್ಳು. ಸ್ವಾವಲಂಬಿ, ಅಂತರ್ಗತ ಮತ್ತು ಕೈಗೆಟುಕುವ ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಸ್ಪಷ್ಟ ಗುರಿಯೊಂದಿಗೆ ಭಾರತದ ಯುಪಿಐ ನೀತಿ




**ಸರ್ಕಾರದ ನಿರ್ಧಾರ ಪ್ರಶ್ನಿಸಿ ಪಿಐಎಲ್**

ವ್ಯಕ್ತಿಯಿಂದ ವ್ಯಾಪಾರಿಗೆ ನಡೆಯುವ ವಹಿವಾಟುಗಳಲ್ಲಿ 2,000 ರೂ. ಕ್ಕಿಂತ ಹೆಚ್ಚಿನ ಪಾವತಿಗೆ ಮರ್ಚೆಂಟ್ ಡಿಸ್ಕೌಂಟ್ ರೇಟ್ ವಿಧಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು (ಪಿಐಎಲ್) ಸಲ್ಲಿಸಲಾಗಿದೆ. ಸೂಕ್ತ ಶಾಸನಬದ್ಧ ರಕ್ಷಣೆಗಳು, ಪಾರದರ್ಶಕತೆ ಅಥವಾ ಜನರೊಂದಿಗೆ ಸಮಾಲೋಚನೆಯಿಲ್ಲದೆ ಈ ಶುಲ್ಕವನ್ನು ಜಾರಿಗೆ ತರಲಾಗಿದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ.

# ಗ್ರಾಮೀಣ ಭಾಗದ ವಿದ್ಯುತ್ ಮಾರ್ಗ ಬಲಗೊಳಿಸಿ

## ಸೆಸ್ಕಾಂ ಅಧಿಕಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಸೂಚನೆ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಪ್ರದೇಶಗಳಲ್ಲಿ ಎದುರಾಗುತ್ತಿರುವ ಕಡಿಮೆ ವೋಲ್ಟೇಜ್ ಸಮಸ್ಯೆ ನಿವಾರಣೆಗೆ ವಿದ್ಯುತ್ ಮಾರ್ಗಗಳ ಬಲವರ್ಧನೆ ಮಾಡಬೇಕು. ನಗರ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಗ್ರಾಮಗಳಿಗೆ ನಗರ ಮಾದರಿಯಲ್ಲಿ ವಿದ್ಯುತ್ ಪೂರೈಕೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರ ಹಾಗು ಗ್ರಾಮಾಂತರ ಪ್ರದೇಶದಲ್ಲಿ ತುರ್ತು ವಿದ್ಯುತ್ ಸಮಸ್ಯೆ, ಮೂಲಸೌಕರ್ಯ ಕಾಮಗಾರಿಗಳ ಪ್ರಗತಿ ಹಾಗು ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆಗೆ ಸಂಬಂಧಿಸಿದಂತೆ ಶಾಸಕರ ಅಧ್ಯಕ್ಷತೆಯಲ್ಲಿ ಕೆಪಿಟಿಸಿಎಲ್, ಸೆಸ್ಕಾಂ ಹಾಗು ನಗರಸಭೆ ಅಧಿಕಾರಿಗಳ ಜಂಟಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ರೈತರ ಐಪಿ ಸೆಟ್‌ಗಳಿಗೆ ಸಕ್ರಮ ಹಾಗು ಬಾಕಿ ಇರುವ ವಿದ್ಯುತ್ ಸಂಪರ್ಕಗಳನ್ನು ಯಾವುದೇ ವಿಳಂಬವಿಲ್ಲದೆ ವಿಲೇವಾರಿ ಮಾಡುವಂತೆ ತಿಳಿಸಿದರು.



**ಕ್ಯಾತನಹಳ್ಳಿ ಏತ ನೀರಾವರಿಗೆ ಮರುಚಾಲನೆ**

ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಗೆ ಸೆಸ್ಕಾಂ ಹಾಗು ಕೆಪಿಟಿಸಿಎಲ್ ವತಿಯಿಂದ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು, ಹಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಯಂತ್ರೋಪಕರಣಗಳನ್ನು ಮರುಚಾಲನೆಗೊಳಿಸುವ ಕಾರ್ಯ ನಡೆಯುತ್ತಿದೆ. ಅಕ್ಟೋಬರ್ 10ರಂದು ಯಗಚಿ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಗುರಿ ಹೊಂದಲಾಗಿದ್ದು, ಇದರಿಂದ ಕ್ಷೇತ್ರದ ನೀರಿನ ಸಮಸ್ಯೆಗೆ ತಕ್ಕ ಮಟ್ಟಿಗೆ ಪರಿಹಾರ ದೊರೆಯಲಿದೆ ಎಂದು ಸ್ವರೂಪ್ ಅವರು ತಿಳಿಸಿದರು.

ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವಂತೆ ನಿಯಮಾನುಸಾರ ಕನಿಷ್ಠ ಏಳು ಗಂಟೆ ವಿದ್ಯುತ್ ಪೂರೈಕೆ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಹಾಸನ ಹಾಗು ಉಗನೆ 220 ಕೆವಿ ಉಪಕೇಂದ್ರಗಳ ಸಾಮರ್ಥ್ಯ ಹೆಚ್ಚಿಸುವ ಬಾಕಿ ಕಾಮಗಾರಿಗಳನ್ನು ತಕ್ಷಣ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಪ್ರಸ್ತಾಪಿತ ಯಲಗುಂದ ಹಾಗೂ ಅಗಿಲೆ ಉಪಕೇಂದ್ರಗಳ ಭೂಸ್ವಾಧೀನ ಮತ್ತು ಟೆಂಡರ್ ಪ್ರಕ್ರಿಯೆಯ ಪ್ರಗತಿಯನ್ನು ಪರಿಶೀಲಿಸಿ, ಕಾಮಗಾರಿಗೆ ವೇಗ ನೀಡುವಂತೆ ಸೂಚಿಸಿದರು.

ಇದೇ ವೇಳೆ ನಗರದ 220 ಕೆವಿ ಸ್ವೀಕರಣಾ ಕೇಂದ್ರದಲ್ಲಿ ಇತ್ತೀಚೆಗೆ ಸಂಭವಿಸಿದ 100 ಎಂವಿಎ ಪರಿವರ್ತಕದ ಅಗ್ನಿ ಅವಘಡದ ಕುರಿತು ಸಭೆಯಲ್ಲಿ ತಾಂತ್ರಿಕ ಪರಿಶೀಲನೆ

» ನಾಲ್ಕನೇ ಪುಟದಲ್ಲಿ

## ಧ್ವನಿವರ್ಧಕ ಬಳಕೆ: ಗಣಪತಿ ವಿಸರ್ಜನೆ ಮೆರವಣಿಗೆಗೆ ತಡೆ

• ಪ್ರಜೋದಯ ವರದಿ



**ಸಕಲೇಶಪುರ:** ಗಣಪತಿ ವಿಸರ್ಜನೆ ಮೆರವಣಿಗೆಯಲ್ಲಿ ಧ್ವನಿವರ್ಧಕ ಬಳಕೆಗೆ ಪೊಲೀಸರು ಅನುಮತಿ ನೀಡಿಲ್ಲವೆಂದು ಆರೋಪಿಸಿ ಗ್ರಾಮಸ್ಥರು ಮೆರವಣಿಗೆಯನ್ನು ಅರ್ಧಕ್ಕೆ ನಿಲ್ಲಿಸಿದ ಘಟನೆ ತಾಲ್ಲೂಕಿನ ಮಾರನಹಳ್ಳಿ ಗ್ರಾಮದಲ್ಲಿ ಬುಧವಾರ ನಡೆದಿದೆ.

ಮಾರನಹಳ್ಳಿ ಗ್ರಾಮದಲ್ಲಿ ಹಲವು ವರ್ಷಗಳಿಂದ ಗ್ರಾಮಸ್ಥರು ಗೌರಿ, ಗಣಪತಿ ಪ್ರತಿಷ್ಠಾಪಿಸಿ, ವಿಸರ್ಜನೆ ಸಂದರ್ಭದಲ್ಲಿ ಮೆರವಣಿಗೆ ನಡೆಸಿಕೊಂಡು ಬರುತ್ತಿದ್ದಾರೆ. ಅದರಂತೆ ಈ ವರ್ಷವೂ ಗೌರಿಗಣಪತಿ ಪ್ರತಿಷ್ಠಾಪಿಸಿದ್ದ ಗ್ರಾಮಸ್ಥರು ಬುಧವಾರ ಅದ್ದೂರಿಯಾಗಿ ಮೆರವಣಿಗೆ ನಡೆಸಿ ವಿಸರ್ಜನೆಗೆ ತೆರಳಿದ್ದರು.

ಟ್ರ್ಯಾಕ್ಟರ್‌ನಲ್ಲಿ ಧ್ವನಿವರ್ಧಕ ಅಳವಡಿಸಿಕೊಂಡು ಮೆರವಣಿಗೆ ಸಾಗುತ್ತಿದ್ದ ವೇಳೆ, ಧ್ವನಿವರ್ಧಕ ಬಳಕೆಗೆ ಅನುಮತಿ ಇಲ್ಲವೆಂದು ಪೊಲೀಸರು ಮೆರವಣಿಗೆಗೆ ಅಡ್ಡಿಪಡಿಸಿದರು. ಆಕ್ರೋಶಗೊಂಡ ಗ್ರಾಮಸ್ಥರು ಮೆರವಣಿಗೆಯನ್ನು ಅರ್ಧದಲ್ಲೇ ನಿಲ್ಲಿಸಿ ಸ್ಥಳದಿಂದ ತೆರಳಿದರು. ಪರಿಣಾಮವಾಗಿ ಗೌರಿಗಣಪತಿ ವಿಗ್ರಹಗಳನ್ನು ಇರಿಸಲಾಗಿದ್ದ ಟ್ರ್ಯಾಕ್ಟರ್‌ನ್ನು ರಸ್ತೆ ಬದಿಯಲ್ಲಿ ನಿಲ್ಲಿಸಲಾಯಿತು. ಕೆಲ ಕಾಲ ವಿಗ್ರಹಗಳು ಅಲ್ಲಿಯೇ ಉಳಿದಿದ್ದವು. ಪೊಲೀಸರ ಕ್ರಮದ ಬಗ್ಗೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿ ವರ್ಷ ಸಂಪ್ರದಾಯದಂತೆ ಮೆರವಣಿಗೆ ನಡೆಸಿಕೊಂಡು ಬರುತ್ತಿದ್ದರೂ ಈ ಬಾರಿ ಧ್ವನಿವರ್ಧಕ ಬಳಕೆಗೆ ಸಂಬಂಧಿಸಿದಂತೆ ಉಂಟಾದ ಸಮಸ್ಯೆಯಿಂದ ವಿಸರ್ಜನೆ ಮೆರವಣಿಗೆ ಅರ್ಧಕ್ಕೆ ನಿಂತಿತು ಎಂದು ಗ್ರಾಮಸ್ಥರು ತಿಳಿಸಿದರು.

# ಕ್ಯಾತನಹಳ್ಳಿ ಏತ ನೀರಾವರಿಯಿಂದ ಕೆರೆಗೆ ನೀರು ಹರಿಸಿ

## ರೈತ ಸಂಘದಿಂದ ಒತ್ತಾಯ | ಪ್ರತಿಭಟನೆಗೆ ಪುಷ್ಪಗಿರಿ ಶ್ರೀ, ಪ್ರೀತಮ್‌ಗೌಡ ಬೆಂಬಲ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಸಾಲಗಾಮೆ ಹೋಬಳಿ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ ಮೊದಲ ಹಂತದಿಂದ ರೈತರ ಜಮೀನುಗಳಿಗೆ ತಕ್ಷಣ ನೀರು ಹರಿಸಬೇಕೆಂದು ಆಗ್ರಹಿಸಿ ರೈತ ಸಂಘ, ಸ್ವಾಮೀಜಿ, ಜನಪ್ರತಿನಿಧಿಗಳಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ನಗರದ ತಣ್ಣೀರುಹಳ್ಳ ಮಠದಿಂದ ಆರಂಭವಾದ ರೈತರ ಕಾಲ್ನಡಿಗೆ ಪ್ರತಿಭಟನಾ ಜಾಥಾ ಬಿ.ಎಂ.ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಆಗಮಿಸಿತು. ರೈತರ ಹೋರಾಟಕ್ಕೆ ಹಳೇಬೀಡು ಪುಷ್ಪಗಿರಿ ಮಠಾಧೀಶರಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಹಾಗು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಬೆಂಬಲ ನೀಡಿದರು.



**ಸಚಿವರಿಗೆ ವಿಡಿಯೋ ಕಾಲ್**

ಪ್ರತಿಭಟನೆ ವೇಳೆ ಪ್ರೀತಮ್‌ಗೌಡ ಅವರು, ಜಲಸಂಪನ್ಮೂಲ ಸಚಿವ ಚಲುವರಾಯಸ್ವಾಮಿ ಅವರಿಗೆ ವಿಡಿಯೋ ಕರೆ ಮೂಲಕ ಮಾತನಾಡಿ, ಯೋಜನೆಯ ವಸ್ತುಸ್ಥಿತಿಯನ್ನು ವಿವರಿಸಿದರು. ಸ್ಪಂದಿಸಿದ ಸಚಿವರು ಶೀಘ್ರ, ಯೋಜನೆಗೆ ಚಾಲನೆ ನೀಡುವುದಾಗಿ ಭರವಸೆ ನೀಡಿ, ಸೆ.20ರೊಳಗೆ ರೈತರು ಹಾಗು ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವುದಾಗಿ ತಿಳಿಸಿದರು.

**ಸೆ.28ರೊಳಗೆ ನೀರು: ಜಿಲ್ಲಾಧಿಕಾರಿ**

ಧರಣಿ ನಿರತರ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು, ಸೆ.28ರೊಳಗೆ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯಿಂದ ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಯೋಜನೆಯ ಎರಡು ಮೋಟಾರ್‌ಗಳನ್ನು ದುರಸ್ತಿಗೊಳಿಸಿ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುವುದೆಂದು ತಿಳಿಸಿದರು. ಜಿಲ್ಲಾಧಿಕಾರಿ ಭರವಸೆ ಹಿನ್ನಲೆಯಲ್ಲಿ ರೈತರು ಪ್ರತಿಭಟನೆಯನ್ನು ಹಿಂಪಡೆದರು.

> **ನಾನು ಶಾಸಕನಾಗಿದ್ದ ಅವಧಿಯಲ್ಲಿ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಗಿತ್ತು. ಆದರೆ, ಕೆಲವು ತಾಂತ್ರಿಕ ಕಾರಣಗಳಿಂದ ಕಾಮ ಗಾರಿ ವಿಳಂಬವಾಗಿದೆ. ಎಲ್ಲರ ವಿಶ್ವಾಸ ಪಡೆದು ಮೊದಲ ಹಂತದ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು.**
>
> **-ಪ್ರೀತಮ್ ಗೌಡ, ಮಾಜಿ ಶಾಸಕ**

ಹಸಿರು ಸೇನೆ, ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಅವರು ಮಾತನಾಡಿ, ಇತ್ತೀಚೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಎರಡು ದಿನಗಳಲ್ಲಿ ನೀರು ಹರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಎರಡು ವಾರ ಕಳೆದರೂ ನೀರು ಹರಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

# ಪ್ರವಾಸಕ್ಕೆ ಬಂದಿದ್ದ ಯುವತಿ ಲಾಡ್ಜ್‌ನಲ್ಲಿ ಸಾವು

- ಸ್ನೇಹಿತರೊಂದಿಗೆ ಸಕಲೇಶಪುರಕ್ಕೆ ಬಂದಿದ್ದ ವರ್ಷಾ
- ಅನುಮಾನಾಸ್ಪದ ಸಾವಿನ ಬಗ್ಗೆ ತನಿಖೆ

• ಪ್ರಜೋದಯ ವರದಿ

**ಹಾಸನ:** ಸ್ನೇಹಿತರೊಂದಿಗೆ ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ಯುವತಿ ಲಾಡ್ಜ್‌ನ ಸ್ನಾನದ ಕೋಣೆಯಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಸಕಲೇಶಪುರ ತಾಲ್ಲೂಕಿನ ವಳಲಹಳ್ಳಿ ಕೂಡಿಗೆ ಗ್ರಾಮದಲ್ಲಿ ನಡೆದಿದೆ.

ಬೆಂಗಳೂರಿನ ನಾಗಸಂದ್ರ ನಿವಾಸಿ ವರ್ಷಾ (23) ಮೃತಪಟ್ಟ ಯುವತಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯೊಂದಿಗೆ ಪ್ರವಾಸಕ್ಕೆ ಬಂದಿದ್ದ ರಘು ಹಾಗು ದರ್ಶನ್ ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮಡಿಕೇರಿ ಮೂಲದ ಸ್ಟಾಫ್ ನರ್ಸ್ ಕಲಾವತಿ ಹಾಗು ಆಟೋ ಚಾಲಕ ಅರುಣ್‌ಕುಮಾರ್ ದಂಪತಿಯ ಪುತ್ರಿ ವರ್ಷಾ, ಮಂಗಳೂರಿನ

» ನಾಲ್ಕನೇ ಪುಟದಲ್ಲಿ



> **ಯುವತಿ ಗ್ಯಾಸ್ ಗೀಸರ್ ಸೋರಿಕೆಯಿಂದ ಮೃತಪಟ್ಟಿರುವುದಾಗಿ ಹೇಳಲಾಗುತ್ತಿದೆ. ಆದರೆ, ಪೋಷಕರು ಸಾವಿನ ಬಗ್ಗೆ ಅನುಮಮಾನ ವ್ಯಕ್ತಪಡಿಸಿದ್ದು, ಅನುಮಾನಾಸ್ಪದ ಸಾವು ಎಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಮರಣೋತ್ತರ ವೈದ್ಯಕೀಯ ಪರೀಕ್ಷೆ ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ.**
>
> **-ಶುಭಾನ್ವಿತ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**



**ಸಾವಿನ ಬಗ್ಗೆ ಪೋಷಕರ ಅನುಮಾನ**

ವರ್ಷಾಗೆ ಲೂಸ್ ಮೋಷನ್ ಆಗಿತ್ತು ಹಾಗೂ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮೃತಪಟ್ಟಳು ಎಂದು ರಘು ಮತ್ತು ದರ್ಶನ್ ಹೇಳಿರುವುದಾಗಿ ತಾಯಿ ತಿಳಿಸಿದ್ದಾರೆ. ಮತ್ತೊಂದೆಡೆ, ಗ್ಯಾಸ್ ಗೀಸರ್ ಸೋರಿಕೆಯಿಂದ ಅಸ್ವಸ್ಥಗೊಂಡಿರುವ ಬಗ್ಗೆ ಪೊಲೀಸರು ದೂರವಾಣಿ ಮೂಲಕ ಮಾಹಿತಿ ನೀಡಿದ್ದರೆಂದೂ ಅವರು ಹೇಳಿದ್ದಾರೆ.

ನನ್ನ ಮಗಳು ಆರೋಗ್ಯವಾಗಿದ್ದಳು. ಪ್ರವಾಸ ಮುಗಿಸಿ ಬಂದ ಬಳಿಕ ಕೆಲಸಕ್ಕೆ ಹೋಗುವುದಾಗಿ ಹೇಳಿದ್ದಳು. ಮಗಳ ಸಾವಿಗೆ ನಿಖರ ಕಾರಣ ತಿಳಿಯಬೇಕೆಂದು ಯುವತಿಯ ತಾಯಿ ಕಲಾವತಿ ಕಣ್ಣೀರಿಟ್ಟಿದ್ದಾರೆ.

## ಸೆ.19 ರಂದು ಪ್ರಜಾಸೇವೆ ಆಂದೋಲನ ಸಭೆ

• ಪ್ರಜೋದಯ ವರದಿ

**ಹಾಸನ :** ಸಕಲೇಶಪುರ ತಾಲ್ಲೂಕಿನ ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಸೆ.19 ರಂದು ಬೆಳಿಗ್ಗೆ 10.30 ಕ್ಕೆ ತಾಲ್ಲೂಕು ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯನ್ನು ಆಯೋಜಿಸಿದ್ದು, ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

**ಇಂದು ವಿಶ್ವಕರ್ಮ ಜಯಂತಿ**

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.17 ರಂದು ಬೆಳಿಗ್ಗೆ 11 ಗಂಟೆಗೆ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸ್ವರೂಪ್ ಅಧ್ಯಕ್ಷತೆ ವಹಿಸುವರು.

# ವಡ್ಡರಹಳ್ಳಿಗೆ ಎತ್ತಿನಹೊಳೆ ನೀರು ಹರಿಸಲು ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಹಗರೆ ಸಮೀಪದ ವಡ್ಡರಹಳ್ಳಿ, ವಡ್ಡರಹಳ್ಳಿ ಕೊಪ್ಪಲು ಹಾಗು ಹಡೇನಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಜೊತೆಗೆ ಕೆರೆಕಟ್ಟೆಗಳನ್ನು ತುಂಬಿಸಲು ಎತ್ತಿನಹೊಳೆ ಕಾಲುವೆಯಿಂದ ನೀರು ಹರಿಸಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಬುಧವಾರ ಕಾಲುವೆ ಬಳಿ ಪ್ರತಿಭಟನೆ ನಡೆಸಿದರು.

ಎತ್ತಿನಹೊಳೆ ಯೋಜನೆಗಾಗಿ ಈ ಭಾಗದ ರೈತರು ನೂರಾರು ಎಕರೆ ಜಮೀನು ಕಳೆದುಕೊಂಡಿದ್ದಾರೆ. ಯೋಜನೆಯ ಕಾಲುವೆ ಗ್ರಾಮಗಳ ಪಕ್ಕದಲ್ಲೇ ಹಾದು ಹೋಗಿದ್ದರೂ ಗ್ರಾಮಗಳಿಗೆ ಕುಡಿಯುವ ನೀರು ಹಾಗು ನೀರಾವರಿ ಸೌಲಭ್ಯ ದೊರೆಯುತ್ತಿಲ್ಲ. ಮಳೆಯ ಕೊರತೆಯಿಂದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ಕೆರೆಕಟ್ಟೆಗಳು ನೀರಿಲ್ಲದೆ ಒಣಗಿವೆ. ಜನರು ಹಾಗೂ ಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

**ಕಾಲುವೆ ಬಳಿ ಗ್ರಾಮಸ್ಥರ ಪ್ರತಿಭಟನೆ**



ವಡ್ಡರಹಳ್ಳಿ ಗ್ರಾಮದ ಮುಖಂಡ ಪುಟ್ಟಸ್ವಾಮಿ ಶೆಟ್ಟಿ ಮಾತನಾಡಿ, ನಮ್ಮ ಗ್ರಾಮದ ಪಕ್ಕದಲ್ಲೇ ಎತ್ತಿನಹೊಳೆ ಕಾಲುವೆ ಹಾದು ಹೋಗಿದೆ. ಯೋಜನೆಗಾಗಿ ಈ ಭಾಗದ ರೈತರು ಜಮೀನು ನೀಡಿದ್ದಾರೆ. ಆದರೆ, ಗ್ರಾಮಗಳ ಕೆರೆಕಟ್ಟೆಗಳನ್ನು ತುಂಬಿಸುವುದಾಗಲಿ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವುದಾಗಲಿ ಆಗಿಲ್ಲ. ಈ ಕುರಿತು ಈ ಹಿಂದೆ ನಡೆದ ಸಭೆಗಳಲ್ಲಿಯೂ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.

ವಡ್ಡರಹಳ್ಳಿ, ವಡ್ಡರಹಳ್ಳಿ ಕೊಪ್ಪಲು

» ನಾಲ್ಕನೇ ಪುಟದಲ್ಲಿ

## ಇಂದು ಜಿಲ್ಲೆಯಲ್ಲಿ ಜಲ ಸಂಪನ್ಮೂಲ ಸಚಿವರ ಪ್ರವಾಸ

**ಹಾಸನ :** ಜಲ ಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಸೆ.17 ರಂದು ಬೆಳಿಗ್ಗೆ 11.45 ಕ್ಕೆ ತೊಳಲುತೊರೆ, ಅರಸೀಕೆರೆ ತಾಲ್ಲೂಕಿನ ಎತ್ತಿನಹೊಳೆ ಯೋಜನೆ ಗುರುತ್ವ ಕಾಲುವೆ ಪ್ಯಾಕೇಜ್-8 ರ ಕಾಮಗಾರಿ ವೀಕ್ಷಣೆ ಮಾಡಲಿರುವರು.

ಮಧ್ಯಾಹ್ನ 12.30ಕ್ಕೆ ಅರಸೀಕೆರೆ ತಾಲ್ಲೂಕಿನ ನಾಯ್ಕನಕೆರೆ ಕಾವಲ್, ಎತ್ತಿನಹೊಳೆ ಯೋಜನೆ ಗುರುತ್ವ ಕಾಲುವೆ ಪ್ಯಾಕೇಜ್-6ರ ವೀಕ್ಷಣೆ, ಮಧ್ಯಾಹ್ನ 1.15 ಕ್ಕೆ ಬೇಲೂರು ತಾಲ್ಲೂಕು, ಐದಳಕಾವಲ್ ಎತ್ತಿನಹೊಳೆ ಯೋಜನೆ ಗುರುತ್ವ ಕಾಲುವೆ ಪ್ಯಾಕೇಜ್-4, 5 ಮತ್ತು 6 ರ ಕಾಮಗಾರಿ ವೀಕ್ಷಣೆ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು.

ಮಧ್ಯಾಹ್ನ 3.15 ಕ್ಕೆ ಸಕಲೇಶಪುರ ತಾಲ್ಲೂಕು ದೊಡ್ಡನಾಗರ ಎತ್ತಿನಹೊಳೆ ಯೋಜನೆ ಹಂತ-1 ಏತ ಕಾಮಗಾರಿಯ ವಿತರಣಾ ತೊಟ್ಟಿ 3, ದೊಡ್ಡನಾಗರ ಹಾಗೂ ವಿತರಣಾ ತೊಟ್ಟಿ 4 ಹೆಬ್ಬನಹಳ್ಳಿ ವೀಕ್ಷಣೆ ಮಾಡಲಿದ್ದಾರೆ.

## ಪರಿಶೀಲಿಸಿ ಕೆರೆ-ಕಟ್ಟೆಗಳಿಗೆ ನೀರು ಹರಿಸುವಂತೆ ಹೆಚ್.ಡಿ.ರೇವಣ್ಣ ಆಗ್ರಹ

# ಕಾಲುವೆಗೆ ನೀರು ಹರಿಸಿದರೂ ಕೆರೆಗಳಿಗೆ ತಲುಪಿಲ್ಲ

• ಪ್ರಜೋದಯ ವರದಿ

**ಹೊಳೆನರಸೀಪುರ:** ಹೆಚ್‌ಎಲ್‌ಬಿಸಿ ಕಾಲುವೆಗೆ ನೀರು ಹರಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ ಹಳ್ಳಿಮೈಸೂರು ಹೋಬಳಿ ಸೇರಿ ಹಲವು ಪ್ರದೇಶಗಳಿಗೆ ಇದುವರೆಗೆ ನೀರು ತಲುಪಿಲ್ಲ. ಸಂಬಂಧಪಟ್ಟ ನೀರಾವರಿ ಅಧಿಕಾರಿಗಳು ಕೂಡಲೇ ಕಾಲುವೆ ಪರಿಶೀಲಿಸಿ ಕೆರೆ-ಕಟ್ಟೆಗಳಿಗೆ ನೀರು ಹರಿಸಬೇಕೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರೇಹಳ್ಳಿ, ನಗರತ್ತಿ, ಶ್ರವಣೂರು, ದೊಡ್ಡಕಾಡನೂರು, ಅಣ್ಣೇಚಾಕನಹಳ್ಳಿ, ಚಿಕ್ಕಚಾಗಹಳ್ಳಿ ಸೇರಿ ಹಲವು ಗ್ರಾಮಗಳ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ಎದುರಾಗಿದೆ. ಹೆಚ್.ಡಿ.ಕುಮಾರಸ್ವಾಮಿ ಅವರ ಅವಧಿಯಲ್ಲಿ 480 ಕೋ.ರೂ. ವೆಚ್ಚದಲ್ಲಿ



ನಾಲೆ ಲೈನಿಂಗ್ ಸೇರಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹೆಚ್‌ಎಲ್‌ಬಿಸಿ ವ್ಯಾಪ್ತಿಯಲ್ಲಿ ಸುಮಾರು 20 ಸಾವಿರ ಎಕರೆ ನೀರಾವರಿ ಪ್ರದೇಶವಿದ್ದು, ಈ ಪ್ರದೇಶಕ್ಕೆ ಸಮರ್ಪಕವಾಗಿ ನೀರು ಹರಿಯುವಂತೆ ಕಾಲುವೆಯಲ್ಲಿ ಅಗತ್ಯ ನೀರಿನ ಮಟ್ಟ ಕಾಯ್ದುಕೊಳ್ಳಬೇಕೆಂದು ತಿಳಿಸಿದರು.

> **ನೀರಾವರಿ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಕೆರೆಗಳನ್ನು ತುಂಬಿಸಬೇಕು. ಜನರಿಗೆ ಕುಡಿಯುವ ನೀರು ಒದಗಿಸಬೇಕು. ಸಮಸ್ಯೆ ಮುಂದುವರಿದರೆ ರೈತರು ಪ್ರತಿಭಟನೆಗೆ ಇಳಿಯುವ ಪರಿಸ್ಥಿತಿ ನಿರ್ಮಾಣವಾಗಬಹುದು. ಅಂತಹ ಪರಿಸ್ಥಿತಿಗೆ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ.**
>
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

**ಕೆರೆ ತುಂಬಿಸುವುದಕ್ಕೆ ಆದ್ಯತೆ**

ನಾನು ಗದ್ದೆಗಳಿಗೆ ನೀರು ಕೇಳುತ್ತಿಲ್ಲ. ಮೊದಲು ಕೆರೆಗಳನ್ನು ತುಂಬಿಸಿ, ಧನಕರಗಳಿಗೆ ನೀರು ಒದಗಿಸಿ. ನಂತರ ಬೆಳೆ ಬೆಳೆಯುವ ಬಗ್ಗೆ ಮಾತನಾಡೋಣ. ಯಾವ ಬೆಳೆಗಳಿಗೆ ನೀರು ಕೊಡಲಾಗುತ್ತದೆ ಎಂಬುದನ್ನು ಅಧಿಕಾರಿಗಳು ಸ್ಪಷ್ಟವಾಗಿ ತಿಳಿಸಬೇಕು.

**ನೀರು ಬಿಡಬೇಡಿ ಎಂದು ಸೂಚಿಸಿದವರು ಯಾರು?**

ನೀರಾವರಿ ಇಲಾಖೆಯ ಕೆಲ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ, ನೀರು ಬಿಡಬೇಡಿ ಎಂದು ಸೂಚನೆ ಬಂದಿದೆ ಎಂಬ ಉತ್ತರ ನೀಡಿದ್ದಾರೆ. ಆದರೆ, ಯಾರು ಈ ಸೂಚನೆ ನೀಡಿದ್ದಾರೆಂಬುದು ಸ್ಪಷ್ಟವಾಗಿಲ್ಲ. ಕಾಲುವೆಯಲ್ಲಿ ನೀರಿನ ಹರಿವಿಗೆ ಯಾರಾದರೂ ಅಡ್ಡಿಪಡಿಸಿದರೆ ಅಗತ್ಯವಿದ್ದಲ್ಲಿ ಪೊಲೀಸ್ ರಕ್ಷಣೆ ಪಡೆದು ನೀರು ಹರಿಸುವಂತೆ ನೀರಾವರಿ ಇಲಾಖೆಯ ಮುಖ್ಯ ಇಂಜಿನೀಯರ್ ಹಾಗು ಮೇಲಾಧಿಕಾರಿಗಳೊಂದಿಗೆ ಮಾತನಾಡಿರುವುದಾಗಿ ರೇವಣ್ಣ ಅವರು ಹೇಳಿದರು.

ದೊಡ್ಡಕಾಡನೂರು ಕೆರೆಗೆ 15 ದಿನಗಳಿಂದ ನೀರು ಹರಿಸಲಾಗುತ್ತಿದೆ ಎಂದು ಹೇಳಲಾಗುತ್ತಿದ್ದರೂ ಹನಿ ನೀರೂ ತಲುಪಿಲ್ಲ. ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುವುದರಿಂದ ನೀರು ತಲುಪಲು ಹೆಚ್ಚು ಸಮಯ ಬೇಕಾಗಬಾರದು. ಅಧಿಕಾರಿಗಳು ಸ್ಥಳಕ್ಕೆ ತೆರಳಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕೆಂದು ಒತ್ತಾಯಿಸಿದರು.

**2.80 ಲಕ್ಷ ಎಕರೆ ಜೋಳ ಹಾನಿ**

ಜಿಲ್ಲೆಯಲ್ಲಿ ಸುಮಾರು 2.80 ಲಕ್ಷ ಎಕರೆ ಜೋಳದ ಬೆಳೆ ಹಾನಿಯಾಗಿದೆ. ಸುಮಾರು 2.21 ಲಕ್ಷ ರೈತರಿಗೆ ಸಂಬಂಧಿಸಿದ ಬೆಳೆ ವಿಮೆ ಮೊತ್ತ ಇದುವರೆಗೆ ಪಾವತಿಯಾಗಿಲ್ಲ . ಬರ ಪರಿಸ್ಥಿತಿಯ ಹಿನ್ನಲೆ ರೈತರಿಗೆ ಬೆಳೆ ಪರಿಹಾರ ಒದಗಿಸಲು ಸರ್ಕಾರ

» ನಾಲ್ಕನೇ ಪುಟದಲ್ಲಿ

## 25 ಲ.ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



**ಹಾಸನ:** ಬಿಟ್ಟಗೋಡನಹಳ್ಳಿ ಗ್ರಾಮದಲ್ಲಿ ಸಿಎಂಐಡಿಪಿ ಅನುದಾನದಡಿ 25 ಲ.ರೂ. ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಗ್ರಾಮದಲ್ಲಿ ರಸ್ತೆ ಸಮಸ್ಯೆ ಕುರಿತು ಹಲವು ದಿನಗಳಿಂದ ಗ್ರಾಮಸ್ಥರು ದೂರು ನೀಡುತ್ತಿದ್ದರು. ಈ ಹಿನ್ನಲೆ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ರಸ್ತೆ ನಿರ್ಮಾಣ ಕಾಮಗಾರಿಯನ್ನು ಗುಣಮಟ್ಟದಿಂದ ಕೈಗೊಂಡು ಆದಷ್ಟು ಶೀಘ್ರ ಪೂರ್ಣಗೊಳಿಸಬೇಕು. ಕಾಮಗಾರಿ ಪೂರ್ಣಗೊಂಡ ಬಳಿಕ ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಅಗತ್ಯ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಹಾಗು ಗುತ್ತಿಗೆದಾರರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಸ್ಥಳೀಯರು, ಗ್ರಾಮಸ್ಥರು, ಪಕ್ಷದ ಮುಖಂಡರು, ಕಾರ್ಯಕರ್ತರು, ಉಪಸ್ಥಿತರಿದ್ದರು.

CMYK CMYK CMYK CMYK

# ಗಣಪನ ಮೂರ್ತಿ ಹಿಂದಿನ ಮಾರುಕಟ್ಟೆ ಸೈಕಾಲಜಿ!

**ಕುಟುಂಬದ ಜನರ ಜೊತೆಗೆ ಬೆಳಕಿನ ಮಧ್ಯೆ ವಿವಿಧ ಭಂಗಿಯಲ್ಲಿ ಫೋಟೋಗಳನ್ನ ಕ್ಲಿಕ್ಕಿಸುತ್ತಾ, ತನ್ನ ಬದುಕಿನ ಖುಷಿಯ ಕ್ಷಣಗಳನ್ನ ತಮ್ಮ ಮೊಬೈಲಿನಲ್ಲಿ ಕೈದು ಮಾಡಿ ಕೊಳ್ಳುತ್ತ ಸಾಗುತ್ತಾರೆ. ಮೈಸೂರು ದಸರಾ ಸಮಯದಲ್ಲಿ ಇಲ್ಲಿನ ಜನ, ಗುಂಪು ಯಾವ ಕೆಲಸವನ್ನ ಮಾಡುತ್ತಾರೋ, ಬಾರ್ಸಿಲೋನಾದ ಜನ, ಗುಂಪು ಅದೇ ಕೆಲಸವನ್ನ ಮಾಡಿದ್ದು ನಾನು ಕಂಡಿದ್ದೇನೆ. ನಮ್ಮ ಭಿನ್ನತೆಗಳ ನಡುವೆ ನಾವು ಖುಷಿಯನ್ನ ಹುಡುಕುತ್ತೇವೆ.**

ವಿಶ್ವರಂಗ ಮೈಸೂರು ದಸರಾ ವಿಶ್ವವಿಖ್ಯಾತಿ. ಇಲ್ಲಿನ ನಗರದ ಎಲ್ಲಾ ಪ್ರಮುಖ ರಸ್ತೆಗಳನ್ನ ಕೂಡ ದೀಪದಿಂದ ಅಲಂಕಾರ ಮಾಡಲಾಗುತ್ತದೆ. ಅದಕ್ಕೇ ಇರಬೇಕು, ಮೈಸೂರು ದಸರಾ ಎಷ್ಟೊಂದು ಸುಂದರ ಎಂದಿರಬೇಕು. ನಗರದ ವಿವಿಧ ಭಾಗಗಳಲ್ಲಿ ಬಹಳ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಸಾಯಂಕಾಲ ಆಗುವುದನ್ನ ಜನತೆ ಕಾಯುತ್ತಿರುತ್ತಾರೆ. ಇಡೀ ನಗರ ನವವಧುವಿನಂತೆ ಶೃಂಗಾರ ಗೊಂಡು ನಿಂತಿರುತ್ತದೆ. ಕೇವಲ ಮೈಸೂರು ಮಾತ್ರವಲ್ಲ, ಕರ್ನಾಟಕ ಮಾತ್ರವಲ್ಲ, ಭಾರತದ ವಿವಿಧ ರಾಜ್ಯಗಳಿಂದ, ಜಗತ್ತಿನ ಬಹಳಷ್ಟು ದೇಶಗಳಿಂದ ಮೈಸೂರು ದಸರಾ ನೋಡಲು ಜನರು ಬರುತ್ತಾರೆ.

ಮೈಸೂರು ವರ್ಷದ ಇತರ ದಿನಗಳಲ್ಲಿ ಕಾಣದ ಸಡಗರದ ಜೊತೆಗೆ ಜನಸಾಗರವನ್ನ ಕೂಡ ಕಾಣುತ್ತದೆ. ಬಾರ್ಸಿಲೋನಾದಲ್ಲಿ ಹದಿನೆಂಟಕ್ಕೂ ಹೆಚ್ಚಿನ ವರ್ಷದ ಬದುಕಿನಲ್ಲಿ ಥೇಟ್ ಇದೇ ಸಂಭ್ರಮವನ್ನ ನಾನು ಕ್ರಿಸ್ಮಸ್ ಹಬ್ಬದಲ್ಲಿ ಕಂಡಿದ್ದೇನೆ. ಬಾರ್ಸಿಲೋನಾ ನಗರದ ಎಲ್ಲಾ ಪ್ರಮುಖ ರಸ್ತೆಗಳನ್ನೂ ದೀಪದಿಂದ ಅಲಂಕಾರ ಮಾಡಲಾಗುತ್ತದೆ. ಕ್ರಿಸ್ಮಸ್ ಹಬ್ಬಕ್ಕೆ ಒಂದೆರಡು ತಿಂಗಳು ಮುಂಚಿನಿಂದಲೇ ರಸ್ತೆಗೆ ಎಲೆಕ್ಟ್ರಿಕ್ ದೀಪವನ್ನ ಕಟ್ಟುವ ಕೆಲಸ ಇಲ್ಲಿನ ಮುನಿಸಿಪಾಲಿಟಿ ಜನ ಶುರು ಮಾಡಿರುತ್ತಾರೆ. ಹಾಗೆ ನೋಡಲು ಹೋದರೆ ಬಾರ್ಸಿಲೋನಾ ಒಂದು ನಗರವಲ್ಲ, ಸ್ಪೇನ್‌ನ ಎಲ್ಲಾ ನಗರಗಳೂ ಕೂಡ ಕ್ರಿಸ್ಮಸ್ ಹಬ್ಬದ ಸಮಯದಲ್ಲಿ ಹೀಗೆ ಇರುತ್ತದೆ. ಸತ್ಯ ಹೇಳಬೇಕೆಂದರೆ ಪೂರ್ಣ ಯೂರೋಪು ಹಬ್ಬದ ವಾತಾವರಣದಲ್ಲಿ ಮಿಂದೇಳುತ್ತದೆ. ಎಡೆಯೂ ದೀಪ ಅಬ್ಬರ. ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ದೇಶಗಳಲ್ಲಿ ಕೂಡ ಕ್ರಿಸ್ಮಸ್ ಹಬ್ಬದ ಸಮಯದಲ್ಲಿ ದೀಪಾಲಂಕಾರ ಮಾಡುವುದು ಸಾಮಾನ್ಯವಾಗಿದೆ.

ದುಬೈ ನಗರವನ್ನು ಕ್ರಿಸ್ಮಸ್ ಹಬ್ಬದಲ್ಲಿ ಕಣ್ತುಂಬಿಕೊಳ್ಳುವ ಮಜವೇ ಬೇರೆ. ಇರಲಿ. ಹಬ್ಬದ ಸಮಯದಲ್ಲಿ ವ್ಯಾಪಾರ ಕೂಡ ಎಡೆ ಜೋರು. ಮನುಷ್ಯ ಮೂಲದಲ್ಲಿ ಉಂಡುಟ್ಟು ಖುಷಿಯಾಗಿರಬೇಕು, ಅದು ಬಾರ್ಸಿಲೋನಾದಲ್ಲಿ ಜೀವಿಸುವ ವ್ಯಕ್ತಿಯಿರಬಹದು ಅಥವಾ ಮೈಸೂರಿನಲ್ಲಿ, ಅಥವಾ ಸೌದಿ ಅರೇಬಿಯಾದಲ್ಲಿ. ಹೀಗಾಗಿ ಹಬ್ಬ ಎನ್ನುವುದು ಖುಷಿಪಡಲು ಒಂದು ನೆಪ ಮಾತ್ರ.

ಕುಟುಂಬದ ಜನರ ಜೊತೆಗೆ ಬೆಳಕಿನ ಮಧ್ಯೆ ವಿವಿಧ ಭಂಗಿಯಲ್ಲಿ ಫೋಟೋಗಳನ್ನ ಕ್ಲಿಕ್ಕಿಸುತ್ತಾ, ತನ್ನ ಬದುಕಿನ ಖುಷಿಯ ಕ್ಷಣಗಳನ್ನ ತಮ್ಮ ಮೊಬೈಲಿನಲ್ಲಿ ಕೈದು ಮಾಡಿ ಕೊಳ್ಳುತ್ತ ಸಾಗುತ್ತಾರೆ. ಮೈಸೂರು ದಸರಾ ಸಮಯದಲ್ಲಿ ಇಲ್ಲಿನ ಜನ, ಗುಂಪು ಯಾವ ಕೆಲಸವನ್ನ ಮಾಡುತ್ತಾರೋ, ಬಾರ್ಸಿಲೋನಾದ ಜನ, ಗುಂಪು ಅದೇ ಕೆಲಸವನ್ನ ಮಾಡಿದ್ದು ನಾನು ಕಂಡಿದ್ದೇನೆ.

ನಮ್ಮ ಭಿನ್ನತೆಗಳ ನಡುವೆ ನಾವು ಖುಷಿಯನ್ನ ಹುಡುಕುತ್ತೇವೆ. ನಮ್ಮ ಕುಟುಂಬ, ನಮ್ಮ ಪರಿವಾರ ಸುಖಿಯಾಗಿರಬೇಕು ಎಂದು ಬಯಸುತ್ತೇವೆ. ನಮ್ಮವರ ಸುಖ ಶಾಂತಿಗೆ ನಾವು ದುಡಿಯುತ್ತೇವೆ. ಒಟ್ಟಿನಲ್ಲಿ ಬದುಕಿನಲ್ಲಿ ನಾನು ಕಂಡುಕೊಂಡ ಸಾರ ಬಹಳ ಸರಳ. ಕ್ರಿಸ್ಮಸ್ ಅಥವಾ ದಸರಾ, ಈದ್ ಅಥವಾ ಹೋಳಿ, ದೀಪಾವಳಿ ಅಥವಾ ಮೆರ್ಸೆ ಹಬ್ಬ ಯಾವುದೇ ಇರಲಿ ಮನುಷ್ಯನಿಗೆ ಬೇಕಿರುವುದು ಉತ್ತಮ ಆಹಾರ, ಬಟ್ಟೆ ಮತ್ತು ಖುಷಿಯಾದ ವಾತಾವರಣ ಮಾತ್ರ.

ಇದು ಜಗತ್ತಿನ ಬಹು ಪಾಲು ಜನರ ಆಶಯ, ಮನಸ್ಸಿನ ಮಾತು. ಆದರೆ ಜಗತ್ತಿನೆಡೆ ಒಂದೆರಡು ಪ್ರತಿಶತ ಜನರಿಗೆ ಹೀಗೆ ಉಂಡುಟ್ಟು ನಲಿಯುವುದು ಸಹ್ಯವಾಗುವುದಿಲ್ಲ. ಈ ಒಂದೆರಡು ಪ್ರತಿಶತ ಜನರ ಮನೋ ವಿಕೃತಿಗೆ ಉಳಿದ 98 ಪ್ರತಿಶತವೇಕೆ ನೋವು ತಿನ್ನಬೇಕು? ಇದರ ಅರಿವು ಬಹುಪಾಲು ಜನರಿಗೆ ಆದ ದಿನ ವಿಶ್ವದಲ್ಲಿ ಶಾಂತಿ ನೆಲಸುತ್ತದೆ. ಆ ದಿನಕ್ಕಾಗಿ ಕಾಯೋಣ. ದಸರಾ ಹಬ್ಬಕ್ಕೆ ಮುನ್ನ ಗೌರಿ ಮತ್ತು ಗಣೇಶ ಹಬ್ಬ ಬರುತ್ತದೆ. ಸೆಪ್ಟೆಂಬರ್ ತಿಂಗಳಿಂದ ಡಿಸೆಂಬರ್‌ವರೆಗೂ ವ್ಯಾಪಾರಿಗಳಿಗೆ ನಿತ್ಯ ಹಬ್ಬ. ವರ್ಷದ ವಹಿವಾಟನ್ನು ಈ ನಾಲ್ಕೈದು ತಿಂಗಳಲ್ಲಿ ಅವರು ಮಾಡಿ ಮುಗಿಸುತ್ತಾರೆ. ಈ ಬಾರಿ ಗೌರಿ ಮತ್ತು ಗಣೇಶ ಎರಡೂ ಒಂದೇ ದಿನ ಬಂದಿರುವ ಕಾರಣ ಮೈಸೂರು ನಗರದ ಬಹಳಷ್ಟು ರಸ್ತೆಗಳು ಜನರಿಂದ ತುಂಬಿ ತುಳುಕುತ್ತಿದ್ದವು.



ಭಾನುವಾರ ಸಂಜೆ ಗಣಪತಿ ಮೂರ್ತಿ ಜೊತೆಗೆ ಹೂವು ಮತ್ತು ಹಣ್ಣನ್ನು ಕೊಂಡು ತರಲು ನಾನು ಮತ್ತು ರಮ್ಯ ಹೋಗಿದ್ದೆವು. ಕಳೆದ ವರ್ಷಕ್ಕಿಂತ ಎಲ್ಲಾ ಪದಾರ್ಥಗಳೂ ದುಪ್ಪಟ್ಟು, ಕೆಲವೊಂದು ವಸ್ತುಗಳು ಅದಕ್ಕಿಂತ ಹೆಚ್ಚಿನ ಬೆಲೆ ಪಟ್ಟಿಯನ್ನು ಹೊತ್ತು ಕುಳಿತಿದ್ದವು. ಇದೇನಪ್ಪ ಈ ಮಟ್ಟದ ಹಣದುಬ್ಬರ ಎಂದುಕೊಂಡು ಗಣೇಶನ ಮೂರ್ತಿ ಖರೀದಿಸಲು ಮಾರಾಟ ಮಾಡುತ್ತಿದ್ದ ಒಬ್ಬಾಕೆಯನ್ನು ಬೆಲೆ ಕೇಳಿದೆ. ಆಕೆ 850 ರೂಪಾಯಿ ಎಂದರು. ಕಳೆದ ವರ್ಷ ಇದೇ ಗಾತ್ರದ ಗಣಪನಿಗೆ 350 ರೂಪಾಯಿ ಕೊಟ್ಟಿದ್ದೆ!

ಅದನ್ನು ರಮ್ಯಳಿಗೆ ಹೇಳಿದೆ. ವರ್ಷದ ಹಿಂದೆ ಕೊಂಡ ಗಣಪನ ಬೆಲೆ ಹೇಗೆ ನೆನಪಲ್ಲಿರುತ್ತದೆ? ಎನ್ನುವುದು ಅವಳ ಪ್ರಶ್ನೆ. ಹತ್ತು ಹೆಜ್ಜೆ ದೂರದಲ್ಲಿ ಇನ್ನೊಂದೆರಡು ಗಣಪನ ಮೂರ್ತಿ ಮಾಡುವ ಅಂಗಡಿಗಳು ಕಂಡವು. ದೀಪಾವಳಿ ಸಮಯದಲ್ಲಿ ಪಟಾಕಿ ಮಾರಲು ಇಡುವ ಅಂಗಡಿಗಳಂತೆ ಗಣಪನ ವಿಗ್ರಹಗಳನ್ನು ಇಟ್ಟುಕೊಂಡ ಐದಾರು ಅಂಗಡಿಗಳು ಕಣ್ಣಿಗೆ ಬಿದ್ದವು. ಒಬ್ಬಾತ ಅದೇ ಗಣಪನ ಮೂರ್ತಿಗೆ 650 ಎಂದರು, ಇನ್ನೊಬ್ಬರು 600, ಹೀಗೆ ಕೊನೆಗೊಬ್ಬ 450 ಎಂದರು. ಅವರೆಲ್ಲರೂ ಒಂದೇ ಕಡೆಯಿಂದ ಗಣಪತಿ ಮೂರ್ತಿಯನ್ನು ತಂದಿರೆ ಎನ್ನುವುದು ಗಣಪನನ್ನು ನೋಡಿದ ಕೂಡಲೇ ಗೊತ್ತಾಗುತ್ತಿತ್ತು.

450 ರೂಪಾಯಿ ಹೇಳಿದವನ ಬಳಿ ಜನ ಚೌಕಾಸಿ ಮಾಡದೆ ಕೊಂಡು ಹೋಗುತ್ತಿದ್ದರು. ಮನುಷ್ಯನ ಗುಣವೇ ಹೀಗೆ ಅಲ್ಲವೇ? 850 ರೂಪಾಯಿ ಎಲ್ಲಿ 450 ರೂಪಾಯಿ ಎಲ್ಲಿ? 850 ರೂಪಾಯಿ ಬಹಳ ಜಾಸ್ತಿ ಎನ್ನುವ ಮನೋಭಾವ ಗ್ರಾಹಕನಲ್ಲಿ ಉತ್ಪತ್ತಿಯಾಗುತ್ತದೆ. 450 ಎಂದ ತಕ್ಷಣ ಸೂಪರ್ ಆಫರ್ ಎನ್ನಿಸಿ ಬಿಡುತ್ತದೆ. ಹೀಗಾಗಿ ಜನ ಚೌಕಾಸಿ ಮಾಡದೆ 450 ರೂಪಾಯಿ ಕೊಟ್ಟು ಕೊಂಡು ಹೋಗುತ್ತಿದ್ದರು. ನಿಮಗೆ ಗೊತ್ತಿರಲಿ, ಇದನ್ನು ಹಾರ್ವರ್ಡ್‌ನಂತಹ ವಿಶ್ವವಿದ್ಯಾಲಯಗಳಲ್ಲಿ, ಬಿಸಿನೆಸ್ ಮಾಡುವುದು ಹೇಗೆ ಎನ್ನುವುದಕ್ಕೆ ವರ್ಷಾನುಗಟ್ಟಲೆ ಪಾಠ ಮಾಡುತ್ತಾರೆ. ಮನುಷ್ಯನ ಸೈಕಾಲಜಿ ಹೇಳಿಕೊಡುತ್ತಾರೆ.

ಮ್ಯಾನೇಜ್ಮೆಂಟ್ ಪರಿಭಾಷೆಯಲ್ಲಿ ಇದಕ್ಕೆ ಎನ್ನಲಾಗುತ್ತದೆ. ಮನುಷ್ಯನ ಮೆದುಳು ಪ್ರಥಮ ಬಾರಿಗೆ ಕೇಳಿದ ಸಂಖ್ಯೆಯನ್ನು, ಪ್ರಥಮ ಬಾರಿಗೆ ಸಿಕ್ಕ ಮಾಹಿತಿಯನ್ನು ಬೇಸ್ ಆಗಿ ತೆಗೆದು ಕೊಳ್ಳುತ್ತದೆ. ಆ ನಂತರ ಸಿಕ್ಕ ಮಾಹಿತಿಯನ್ನು, ಸಂಖ್ಯೆಯನ್ನು ಅದು ಗೊತ್ತಿಲ್ಲದೇ ಪ್ರಥಮ ಬಾರಿಗೆ ಸಿಕ್ಕ ಸಂಖ್ಯೆಯೊಂದಿಗೆ ಹೋಲಿಕೆ ಮಾಡಿ ಸರಿ ತಪ್ಪುಗಳನ್ನು ನಿರ್ಧರಿಸುತ್ತದೆ. ಅದನ್ನು ರಮ್ಯಳಿಗೆ ಹೇಳಿದೆ.

350 ಅಥವಾ 400 ರೂಪಾಯಿಗಿಂತ ಹೆಚ್ಚು ಈ ಗಣಪನಿಗೆ ಕೊಡುವಂತಿಲ್ಲ ಎಂದಿದ್ದೆ. ಆಕೆ, ಮೈಸೂರಿನ ಗಲ್ಲಿಯೊಂದರಲ್ಲಿ ಗಣಪನ ಮೂರ್ತಿ ಮಾರುವವರಿಗೆ ಅಷ್ಟು ಬುದ್ಧಿ ಇರಲು ಸಾಧ್ಯವೇ? ನೀನು ಸ್ವಲ್ಪ ಹೆಚ್ಚು ಯೋಚನೆ ಮಾಡುತಿದ್ದೀಯ. 450 ಕೊಟ್ಟು ಸುಮ್ಮನೆ ತೆಗೆದು ಕೊಂಡು ಹೋಗೋಣ ಎಂದಳು. ಸರಿ, ಆದರೆ ಐದತ್ತು ನಿಮಿಷ ನಿಂತು ಜನರ ವರ್ತನೆಯನ್ನು ಗಮನಿಸೋಣ ಎನ್ನುವ ನನ್ನ ಮಾತಿಗೆ ಅವಳು ಒಪ್ಪಿದ್ದಳು. ಹದಿನೈದು ನಿಮಿಷದಲ್ಲಿ ಆತನ ಬಳಿ ಇದ್ದ ಗಣಪನ ಮೂರ್ತಿಗಳಲ್ಲಿ 80 ಪ್ರತಿಶತ ಮಾರಾಟವಾದವು. ಆತ ತನ್ನ ಮೊಬೈಲ್ ಮೂಲಕ ಯಾರಿಗೋ ಕರೆ ಮಾಡಿದ.

ಒಂದು ನಿಮಿಷದಲ್ಲಿ ಹತ್ತಾರು ಹುಡುಗರು ಗಣೇಶನ ಮೂರ್ತಿ ಸ್ಟಾಕ್ ತುಂಬಿಸಿದರು. ಅರಗಿಸಿ ಕೊಳ್ಳಲು ಕಷ್ಟ, ಆದರೆ ಕಣ್ಣಾರೆ ಕಂಡದ್ದು ಹೇಳಲೇ ಬೇಕು. 850 ರೂಪಾಯಿ ಬೆಲೆ ಹೇಳಿದ್ದ ಅಂಗಡಿಯ ಹೊಕ್ಕು ಅಲ್ಲಿದ್ದ ಸ್ಟಾಕ್‌ನಿಂದ ತಂದು ಇಲ್ಲಿಟ್ಟಿದ್ದರು!

ವರ್ಷಗಳ ಕಾಲ ಬಿಸಿನೆಸ್ ಸ್ಕೂಲ್‌ನಲ್ಲಿ ಕಲಿಸುವ ಮನೋಶಾಸ್ತ್ರ, ಇವರಿಗೆ ಸಹಜವಾಗಿ ಸಿದ್ಧಿಸಿತ್ತು. ಇನ್ನೊಂದು ಸತ್ಯ ಅರಗಿಸಿಕೊಳ್ಳಲು ಕಷ್ಟವಾದದ್ದು, ಅಲ್ಲಿ ಅಂಗಡಿ ಹಾಕಿದವರೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದರು! ಗಣಪನ ಮೂರ್ತಿ ಕೊಳ್ಳಲು ಹೋಗುವುದು ವಿಶ್ವವಾಣಿ ಅಂಕಣ ಬರಹಕ್ಕೆ ಸರಕು ಒದಗಿಸುತ್ತೆ ಎನ್ನುವ ಲವಲೇಶ ಐಡಿಯಾ ಇರಲಿಲ್ಲ. ಎಲ್ಲಾ ಬಡಾವಣೆಯಲ್ಲಿ ಇವತ್ತು ಮಾರವಾಡಿ ಕಮ್ಯುನಿಟಿಯವರು ಅಂಗಡಿ ಇಟ್ಟಿರುತ್ತಾರೆ. ಅವರೆಲ್ಲರ ಅಂಗಡಿಯಲ್ಲಿ ಬೆಲೆಗಳು ಸೇಮ್ ಇರುತ್ತದೆ. ಒಂದು ಅಂಗಡಿಯನ್ನು ಹೊಕ್ಕರೆ ಸಾಕು. ಅವರು ನಮಗೆ ಬೇಕಾಗಿರುವ ವಸ್ತುವನ್ನು ನಮ್ಮ ಬಳಿ ಇಲ್ಲ ಎಂದು ಎಂದಿಗೂ ಹೇಳುವುದಿಲ್ಲ.

ನಮ್ಮದೇ ಇನ್ನೊಂದು ಅಂಗಡಿಯಲ್ಲಿದೆ ಐದು ನಿಮಿಷ ಕುಳಿತುಕೊಳ್ಳಿ ತರಿಸಿಕೊಡುತ್ತೇನೆ, ಎನ್ನುತ್ತಾರೆ. ನೀವು ಬೇಡ ಎಂದು ಹೋದರೂ ಬೆಲೆಯೇನೂ ಬದಲಾಗುವುದಿಲ್ಲ, ಎಲ್ಲೆಡೆ ಅವರ ಬೆಲೆ ಸೇಮ್ ಇರುತ್ತದೆ. ಅವರ ಅಂಗಡಿಗೆ ಬರುವ ಎಲ್ಲಾ ವಸ್ತುಗಳನ್ನು ಕೂಡ ಅವರು ಒಟ್ಟಾಗಿ ಕೊಂಡಿರುತ್ತಾರೆ. ಹೀಗಾಗಿ ಅವರ ಕಾ ಸೇಮ್ ಇರುತ್ತದೆ. ಹೀಗಾಗಿ ಆ ಕಮ್ಯುನಿಟಿ ಬಿಸಿನೆಸ್‌ನಲ್ಲಿ ಸೋಲು ಕಾಣುವುದಿಲ್ಲ. ಆದರೆ ಕನ್ನಡಿಗರು ಈ ಮಟ್ಟಕ್ಕೆ ಸೈಕಾಲಜಿ ಬಳಸಿದ್ದು ಕಂಡದ್ದು ಇದೇ ಮೊದಲ ಬಾರಿ!

ಕೊನೆಗೆ ಆ ಅಂಗಡಿಯವರು 350 ರುಪಾಯಿಗೆ ನನಗೆ ಗಣಪನ ಮೂರ್ತಿ ಕೊಟ್ಟರು. ಸಾರ್ ವರ್ಷಕ್ಕೊಮ್ಮೆ ಬರುವ ಹಬ್ಬ, ಅಲ್ಲದೆ ಹಬ್ಬದ ಸಮಯದಲ್ಲಿ ಜನ ಹೆಚ್ಚು ಯೋಚಿಸುವುದಿಲ್ಲ, ಅವರ ಬಳಿ ಹೆಚ್ಚು ವೇಳೆ ಕೂಡ ಇರುವುದಿಲ್ಲ, ಹೀಗಾಗಿ ನಾಲ್ಕು ಕಾಸು ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಆಡಿದರು. ಎಲ್ಲಾ ಸಮಯದಲ್ಲೂ ಈ ಸೈಕಾಲಜಿ ವರ್ಕ್ ಆಗುವುದಿಲ್ಲ ಸಾರ್, ಗ್ರಾಹಕರು ಕೂಡ ಬುದ್ಧಿವಂತರಾಗುತ್ತಿದ್ದಾರೆ ಎಂದರು.

ಅಂಗಡಿಯವರ ಮಾತು ನನ್ನನ್ನು ಗೆಳೆಯ ಅಮುದಾ ಗಣೇಶ್ ಜೊತೆಯಲ್ಲಿ ಮೆಜೆಸ್ಟಿಕ್‌ನಲ್ಲಿ ಶೂಸ್ ಕೊಳ್ಳಲು ಹೋದಾಗಿನ ಘಟನೆಯನ್ನು ನೆನಪಿಗೆ ತಂದಿತು. ರಸ್ತೆ ಬದಿಯಲ್ಲಿ ಬಟ್ಟೆ, ಶೂಸ್ ಮಾರುವವರ ಸುತ್ತ ಒಂದಷ್ಟು ಜನ ಗ್ರಾಹಕರಂತೆ ನಿಂತಿರುತ್ತಿದ್ದರು. ಅವರಾರೂ ನಿಜವಾದ ಗ್ರಾಹಕರಲ್ಲ, ಅವರೆಲ್ಲರೂ ಆ ವ್ಯಾಪಾರಸ್ಥನ ಪರಿಚಿತರು. ಸಾವಿರ ರೂಪಾಯಿ ಶೂಸ್ 800 ರುಪಾಯಿಗೆ ಅವರು ಕೇಳುತ್ತಾರೆ. ವ್ಯಾಪರಸ್ಥ ಒಂದಷ್ಟು ಕೊಸರಾಡಿ ಕೊನೆಗೆ 800ಕ್ಕೆ ಶೂಸ್ ಮಾರುತ್ತಾರೆ. ಅಲ್ಲಿ ಶೂಸ್ ಕೊಳ್ಳಲು ಹೋದ ನಮ್ಮಂತಹ ನಿಜವಾದ ಗ್ರಾಹಕರು ಕೂಡ 800ಕ್ಕೆ ಕೊಡಿ ಎನ್ನುತ್ತೇವೆ. ಆತ ನೀವು ಅವರಿಗೆ ಕೊಟ್ಟದ್ದನ್ನು ನೋಡಿದ್ದೀರಿ, ನನಗೆ ಬೇರೆ ದಾರಿಯಿಲ್ಲ, ಹೀಗಾಗಿ ಕೊಡುತ್ತಿದ್ದೇನೆ. ನನಗೆ ಇದರಲ್ಲಿ ಲಾಭವೇ ಇಲ್ಲ ಎನ್ನುವ ಗೋಣಗಾಟ ಮಾಡಿ ಮಾರುತ್ತಾನೆ!



ಈ ಟ್ರಿಕ್ ಮೆಜೆಸ್ಟಿಕ್‌ಗೆ ಪ್ರಥಮ ಬಾರಿಗೆ ಹೋದವರಿಗೆ, ವರ್ಷಕ್ಕೊಮ್ಮೆ ಹೋಗುವವರಿಗೆ ಅರ್ಥವಾಗುವುದಿಲ್ಲ. ಆದರೆ ಅಮುದ ಗಣೇಶ್ ನುರಿತ ಗ್ರಾಹಕನಾಗಿದ್ದ. ನೀವು ನಂಬುವುದಿಲ್ಲ, ಅವತ್ತಿಗೆ ಸಾವಿರ ರೂಪಾಯಿ ಶೂಸ್ ಇನ್ನೂರು ರುಪಾಯಿಗೆ ಕೊಡಿಸಿದ್ದ! ಚೌಕಾಸಿ ಎನ್ನುವುದು ಮನಷ್ಯನ ಸಹಜ ಗುಣ. ಹೇಳಿದ ಬೆಲೆ ಕೊಟ್ಟು ತೆಗೆದುಕೊಂಡು ಬಂದರೆ ಮೋಸ ಹೋಗಿದ್ದೇವೆ ಎನ್ನುವ ಭಾವನೆ ಬಹಳಷ್ಟು ಭಾರತೀಯರಲ್ಲಿ ಮನೆ ಮಾಡಿದೆ. ಇದಕ್ಕೆ ಕಾರಣ ನಮ್ಮ ವ್ಯಾಪಾರಸ್ಥರು. ಹೇಗೂ ಚೌಕಾಸಿ ಮಾಡುತ್ತಾರೆ ಎನ್ನುವ ಕಾರಣಕ್ಕೆ ಅವರು ಹೆಚ್ಚಿನ ಬೆಲೆಯನ್ನು ಹೇಳುತ್ತಾರೆ.

ಇದು ಕೋಳಿ ಮೊದಲಾ ಅಥವಾ ಮೊಟ್ಟೆ ಮೊದಲಾ ಎನ್ನುವ ಪ್ರಶ್ನೆಯಂತೆ. ಯಾರು ಮೊದಲು ಇದನ್ನು ಶುರು ಮಾಡಿದರು ಎನ್ನುವುದು ಯಕ್ಷ ಪ್ರಶ್ನೆ. ಹೀಗಾಗಿ ಚೌಕಾಸಿ ಎನ್ನುವುದು ನಮ್ಮ ರಕ್ತದಲ್ಲಿ ಬಂದು ಬಿಟ್ಟಿದೆ. ಯೂರೋಪಿನ ಬಹಳಷ್ಟು ದೇಶಗಳಲ್ಲಿ ಕೂಡ ಚೌಕಾಸಿ ಮಾಡಬೇಕಾಗುತ್ತದೆ.

ಕೆಲವೊಂದು ದೇಶಗಳಲ್ಲಿ ಚೌಕಾಸಿ ಮಾತೇ ಇಲ್ಲ. ಗ್ರಾಹಕನ ಮನಸ್ಸನ್ನು ಅರಿತುಕೊಂಡು ಅವನಿಗೆ ಮಾರಲು ದೊಡ್ಡ ದೊಡ್ಡ ಮಾರ್ಕೆಟಿಂಗ್ ಕಂಪನಿಗಳು ಹುಟ್ಟಿಕೊಂಡಿವೆ. ಗ್ರಾಹಕನಿಗೆ ಗೊತ್ತಿಲ್ಲದ ಸತ್ಯಗಳು ಅವಕ್ಕೆ ಗೊತ್ತಿವೆ. ಮಾರಾಟ ಎನ್ನುವುದು ಬೇಕಾದ ವಸ್ತುಗಳನ್ನು ಹಣ ಕೊಟ್ಟು ಕೊಳ್ಳುವ ಸರಳ ಪ್ರಕ್ರಿಯೆಯಾಗಿ ಉಳಿಯದೆ, ಅದೊಂದು ಮನಶ್ಶಾಸ್ತ್ರವಾಗಿ, ಅದನ್ನು ಅಧ್ಯಯನ ಮಾಡುವುದೇ ಸಾವಿರಾರು ಕೋಟಿ ರೂಪಾಯಿ ಉದ್ಯಮವಾಗಿ ಬೆಳೆದು ನಿಂತಿದೆ.

**– ರಂಗಸ್ವಾಮಿ ಎಂ**

## ಸತ್ಯ ಅಪ್ರಿಯವಾದರೂ, ಔಷಧದಂತೆ

**ಇಂದಿನ ವಾಸ್ತವ ಬದುಕಿನಲ್ಲೂ ನಾವು ಇದನ್ನೇ ಕಾಣುತ್ತಿದ್ದೇವೆ. ತಂದೆ ತನ್ನ ಮಗನ ಅನ್ಯಾಯಗಳನ್ನು ಪ್ರೀತಿಯ ಹೆಸರಿನಲ್ಲಿ ಸಮರ್ಥಿಸುತ್ತಾನೆ; ಸ್ನೇಹಿತ ದುಶ್ಚಟಗಳಿಗೆ ದಾಸನಾಗುತ್ತಿದ್ದರೂ ಸ್ನೇಹ ಕೆಡಬಾರದು ಎಂದು ಸುಮ್ಮನಿರುತ್ತೇವೆ; ಸಂಗಾತಿಯ ತಪ್ಪುಗಳನ್ನು ಮುಚ್ಚಿಟ್ಟು ಬದುಕು ಸಾಗಿಸಲು ನೋಡುತ್ತೇವೆ; ಯಾರಾದರೂ ನಮ್ಮ ಲೋಪಗಳನ್ನು ಎತ್ತಿ ತೋರಿಸಿದರೆ ಅವರು ನನ್ನ ಏಳಿಗೆಯನ್ನು ಸಹಿಸದೆ ಹೀಗೆ ಹೇಳುತ್ತಿದ್ದಾರೆ ಎಂದು ದೂರವಿಡುತ್ತೇವೆ.**

ಒಂದೊಳ್ಳೆ ಮಾತು ರಾಮಾಯಣದಲ್ಲಿ ರಾವಣನ ಆಸ್ಥಾನದ ಪ್ರಸಂಗವಿದು. ಸೀತೆಯನ್ನು ಅಪಹರಿಸಿ ತಂದ ರಾವಣನಿಗೆ ಇಡೀ ಸಭೆ ಜಯಘೋಷ ಹಾಕುತ್ತಿತ್ತು. ನೀನು ತ್ರಿಲೋಕ ವಿಜಯಿ, ದೇವತೆಗಳನ್ನೇ ನಡುಗಿಸಿದವನು, ಈ ಮಾನವ ರಾಮ ನಿನಗೊಂದು ಲೆಕ್ಕವೇ? ಎಂದು ಮಂತ್ರಿಗಳು, ಸೇನಾ ಪತಿಗಳು ಹೊಗಳುಭಟ್ಟರಂತೆ ನುಡಿಯುತ್ತಿದ್ದರು. ಆ ಸುಳ್ಳು ಹೊಗಳಿಕೆಯೇ ರಾವಣನ ಸರ್ವನಾಶಕ್ಕೆ ಅಡಿಪಾಯವಾಯಿತು. ಆದರೆ, ಅದೇ ಸಭೆಯಲ್ಲಿ ಒಬ್ಬ ವ್ಯಕ್ತಿ ಧೈರ್ಯದಿಂದ ಎದ್ದು ನಿಂತ– ಅವನೇ ರಾವಣನ ತಮ್ಮ ವಿಭೀಷಣ. ಆತ ರಾವಣನ ಕಾಲಿಗೆ ಬಿದ್ದು ಒಂದು ಕಟು ಸತ್ಯವನ್ನು ಹೇಳಿದ: ಸುಲಭಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ಅಪ್ರಿಯಸ್ಯ ಚ ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ

ರಾಜನ್, ಮನಸ್ಸಿಗೆ ಇಷ್ಟವಾಗುವ ಸಿಹಿ ಮಾತುಗಳನ್ನು ಹೇಳುವ ಜನ ಲೋಕದಲ್ಲಿ ಹೇರಳವಾಗಿ ಸಿಗುತ್ತಾರೆ. ಆದರೆ ಕೇಳಲು ಕಹಿಯಾದರೂ, ಪರಿಣಾಮದಲ್ಲಿ ಹಿತವನ್ನುಂಟು ಮಾಡುವ ಸತ್ಯದ ಮಾತನ್ನು ಹೇಳುವವರೂ ವಿರಳ, ಅದನ್ನು ಶಾಂತವಾಗಿ ಕೇಳಿಸಿಕೊಳ್ಳುವವರೂ ವಿರಳ. ಪರಸೀ ವ್ಯಾಮೋಹ ಅಧರ್ಮ, ಅದು ಇಡೀ ಲಂಕೆಯನ್ನೇ ಸುಟ್ಟು ಬೂದಿ ಮಾಡುತ್ತದೆ ಎಂದು ವಿಭೀಷಣ ನೇರವಾಗಿ ಎಚ್ಚರಿಸಿದ. ರಾವಣನಿಗೆ ಸತ್ಯವನ್ನು ಒಪ್ಪಿಕೊಳ್ಳುವ ವಿವೇಕವಿರಲಿಲ್ಲ; ತನ್ನ ಅಹಂಕಾರದ ಮುಂದೆ ಸತ್ಯ ಕಹಿಯಾಗಿ ಕಂಡಿತು. ವಿಭೀಷಣನನ್ನು ಕಾಲಿನಿಂದ ಒದ್ದು ಸಭೆಯಿಂದ ಹೊರಹಾಕಿದ. ರಾವಣ ಕಳೆದುಕೊಂಡದ್ದು ಕೇವಲ ಒಬ್ಬ ತಮ್ಮನನ್ನಲ್ಲ; ಬದಲಿಗೆ ತನ್ನ ವಂಶವನ್ನೇ ರಕ್ಷಿಸಬಲ್ಲ ಏಕೈಕ ಸದ್ಬುದ್ಧಿಯನ್ನು. ಮಹಾಭಾರತದಲ್ಲಿ ವಿದುರನ ಮಾತು ಕೇಳದ ಧೃತರಾಷ್ಟ್ರ ಇಡೀ ಸಾಮ್ರಾಜ್ಯವನ್ನೇ ಕಳೆದುಕೊಂಡಂತೆ, ರಾವಣ ಸತ್ಯವನ್ನು ನಿರ್ಲಕ್ಷಿಸಿ ತನ್ನ ಇಡೀ ಕುಲವನ್ನೇ ನಾಶ ಮಾಡಿಕೊಂಡ. ಕಹಿ ಸತ್ಯವೇ ಬದುಕಿನ ದಿವ್ಯೌಷಧ: ಒಬ್ಬ ಮನುಷ್ಯನನ್ನು ಕಳೆದುಕೊಳ್ಳುವುದು ಆತ ನಮ್ಮನ್ನು ಅಗಲಿ ಹೋದಾಗ ಅಲ್ಲ; ಬದಲಿಗೆ ನಾವು ಆತನ ಮಾತುಗಳನ್ನು ಕೇಳುವುದನ್ನೇ ನಿಲ್ಲಿಸಿದಾಗ. ಬದುಕಿನಲ್ಲಿ ಸತ್ಯ ಕಹಿಯಾಗಿರುತ್ತದೆ, ಸುಳ್ಳು ತತ್ಕಾಲಕ್ಕೆ ಸಿಹಿಯಾಗಿರುತ್ತದೆ. ಆದರೆ ಆ ತಾತ್ಕಾಲಿಕ ಸಿಹಿಗೆ ಮರುಳಾಗಿ, ಸತ್ಯದ ಕಹಿಯನ್ನು ನಿರ್ಲಕ್ಷಿಸಿದರೆ ಎದುರಾಗುವ ಅನಾಹುತ ಕಲ್ಪನೆಗೂ ಮೀರಿದ್ದು. ಇಂದಿನ ವಾಸ್ತವ ಬದುಕಿನಲ್ಲೂ ನಾವು ಇದನ್ನೇ ಕಾಣುತ್ತಿದ್ದೇವೆ. ತಂದೆ ತನ್ನ ಮಗನ ಅನ್ಯಾಯಗಳನ್ನು ಪ್ರೀತಿಯ ಹೆಸರಿನಲ್ಲಿ ಸಮರ್ಥಿಸುತ್ತಾನೆ; ಸ್ನೇಹಿತ ದುಶ್ಚಟಗಳಿಗೆ ದಾಸನಾಗುತ್ತಿದ್ದರೂ ಸ್ನೇಹ ಕೆಡಬಾರದು ಎಂದು ಸುಮ್ಮನಿರುತ್ತೇವೆ; ಸಂಗಾತಿಯ ತಪ್ಪುಗಳನ್ನು ಮುಚ್ಚಿಟ್ಟು ಬದುಕು ಸಾಗಿಸಲು ನೋಡುತ್ತೇವೆ; ಯಾರಾದರೂ ನಮ್ಮ ಲೋಪಗಳನ್ನು ಎತ್ತಿ ತೋರಿಸಿದರೆ ಅವರು ನನ್ನ ಏಳಿಗೆಯನ್ನು ಸಹಿಸದೆ ಹೀಗೆ ಹೇಳುತ್ತಿದ್ದಾರೆ ಎಂದು ದೂರವಿಡುತ್ತೇವೆ. ಅಂಥ ಮಮತೆ ಕಣ್ಣು ಮುಚ್ಚಿಸಿದಾಗ ಅಧರ್ಮವೂ ಧರ್ಮದಂತೆ ಭಾಸವಾಗುತ್ತದೆ.

ನಮಗೆ ಬೇಕಾಗಿರುವುದು ನಮ್ಮ ತಪ್ಪುಗಳಿಗೂ ಚಪ್ಪಾಳೆ ತಟ್ಟುವ ಜನರಲ್ಲ. ನಮ್ಮ ತಪ್ಪನ್ನು ತಿದ್ದಿ, ನಮ್ಮ ಮುಖದ ಮೇಲೆಯೇ ನೇರವಾಗಿ ಸತ್ಯವನ್ನು ಹೇಳುವ ಒಬ್ಬ ಹಿತೈಷಿ. ಕಹಿ ಮಾತ್ರೆಯನ್ನು ಉಗಿಯದೆ ನುಂಗಿದಾಗ ರೋಗ ವಾಸಿಯಾಗುವಂತೆ, ಹಿತೈಷಿಯ ಕಹಿ ಮಾತನ್ನು ಸ್ವೀಕರಿಸಿದಾಗ ನಮ್ಮ ಬದುಕು ಸರಿಹಾದಿಗೆ ಬರುತ್ತದೆ. ಸುಳ್ಳು ಹೊಗಳಿಕೆಯ ಜೇನು ಹನಿ ಕ್ಷಣಿಕ ಆನಂದ ತರಬಹುದು, ಆದರೆ ಸತ್ಯದ ಕಹಿ ಕಷಾಯವೇ ಜೀವನವನ್ನು ಮಹಾ ದುರಂತಗಳಿಂದ ರಕ್ಷಿಸುತ್ತದೆ. ನಮ್ಮ ಸುತ್ತಲೂ ಸತ್ಯವನ್ನು ನಿರ್ಭಯವಾಗಿ ಹೇಳುವ ಕನಿಷ್ಠ ಒಬ್ಬ ವ್ಯಕ್ತಿಗೆ ಜಾಗವಿರಲಿ. ಅವರ ಮಾತು ಕೆಲವೊಮ್ಮೆ ನಮಗೆ ಅಸಹನೀಯವೆನಿಸಿದರೂ ಸಮಾಧಾನದಿಂದ ಯೋಚಿಸಿದಾಗ ಆ ಮಾತಿನ ಹಿಂದಿನ ಮರ್ಮದ ಅರಿವು ನಮಗಾಗುತ್ತದೆ. ಹೊಗಳಿ ಹೇಳುವವರು ಹಾಳಾಗಲಿಕೆ ಹೇಳುತ್ತಾರೆ, ಉಗಿದು ಹೇಳುವವರು ಉದ್ಧಾರವಾಗಲು ಹೇಳುತ್ತಾರೆ ಎಂದು ನಮ್ಮ ಹಿಂದಿನವರು ಗಾದೆಯನ್ನೇ ಮಾಡಿದ್ದಾರೆ. ಪ್ರತಿ ಬೈಗುಳದ ಹಿಂದೆ ಸಿಟ್ಟಿರುವುದಿಲ್ಲ, ನಮ್ಮನ್ನು ಚಿಕ್ಕವರಾಗಿಸುವ ಉದ್ದೇಶವಿರುವುದಿಲ್ಲ. ಆದ್ದರಿಂದ ಯಾರು ನಮ್ಮೊಡನೆ ಏಕೆ ಕಹಿಯಾಗಿ ವರ್ತಿಸುತ್ತಿದ್ದಾರೆ ಎನ್ನುವುದನ್ನು ಸಮಾಧಾನದಿಂದ ಅರಿತು ಕೊಂಡಾಗ ಬದುಕಲ್ಲಿ ಸರಿದಾರಿಯಲ್ಲಿ ನಡೆಯುವ ದಾರಿದೀಪಗಳನ್ನ ಜೊತೆಯ ಇರಿಸಿಕೊಂಡ ಹಾಗಾಗುತ್ತದೆ. ಇಂತಹವರು ನಮ್ಮ ಸುತ್ತಲೂ ಇದ್ದರೆ ಖಂಡಿತ ಮೈ ಮರೆಯದಂತೆ ನಮ್ಮ ಬೆಳವಣಿಗೆಗೆ ಕಾರಣರಾಗುತ್ತಾರೆ.

**– ರೂಪಾ ಗುರುರಾಜ್**



## ಉಳ್ಳವರಿಗೆ ಮೇಲ್ ರಸ್ತೆ, ಇಲ್ಲದವರಿಗೆ ದುರವಸ್ಥೆ!

**ಸಾರ್ವಜನಿಕರ ನೆಲವನ್ನು ಬಳಸಿದ, ಸರಕಾರದ ದುಡ್ಡಿನಲ್ಲಿ ನಿರ್ಮಾಣಗೊಂಡ ರಸ್ತೆಗಳು ಸಾರ್ವಜನಿಕ ರಸ್ತೆಗಳೇ ಹೊರತು ಇವು ಖಾಸಗಿ ರಸ್ತೆಗಳಾಗಲು ಸಾಧ್ಯವಿಲ್ಲ. ಆದರೆ ಸಾರ್ವಜನಿಕ ರಸ್ತೆಗಳನ್ನು ಕೆಲವರಿಗಷ್ಟೇ ಮೀಸಲಿಡುವ ಸೇವಾತಾರತಮ್ಯ ನೀತಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಸಮಾನ ಆದ್ಯತೆ ನೀಡುತ್ತಿವೆ. ಹೀಗಾಗಿ ಹೊಸದಾಗಿ ಕಟ್ಟಿದ್ದೆಲ್ಲವೂ ಉಳ್ಳವರಿಗೆ ಸೀಮಿತವಾಗುತ್ತಿವೆ.**

ಲೋಕಮತ ಬೆಂಗಳೂರು ಉಳ್ಳವರ ಪಾಲಾಗುತ್ತಿದೆಯೇ ಎಂದು ಹಿಂದೊಮ್ಮೆ ಹಿಂದೆ ಇದೇ ಅಂಕಣದಲ್ಲಿ ಬರೆದಿದ್ದೆ. ಆ ಮಾತು ಈಗ ನಿಜವಾಗುತ್ತಿದೆ. ಬೆಂಗಳೂರಿನ ಪ್ರಮುಖ ಫ್ಲೈ ಓವರ್‌ಗಳಲ್ಲಿ ದ್ವಿಚಕ್ರ, ತ್ರಿಚಕ್ರ ಮತ್ತು ಗೂಡ್ಸ್ ವಾಹನಗಳ ಸಂಚಾರವನ್ನು ನಿಷೇಧಿಸಲು ರಾಜ್ಯ ಸರಕಾರ ಮುಂದಾಗಿದೆ. ಸಾರ್ವಜನಿಕರ ತೀವ್ರ ವಿರೋಧದಿಂದಾಗಿ ಈ ಆದೇಶ ಸದ್ಯಕ್ಕೆ ಮಾರ್ಪಾಡು ಕಂಡಿದೆ. ರಸ್ತೆ ಸುರಕ್ಷತೆ ಮತ್ತು ಸಂಚಾರ ದಟ್ಟಣೆ ನಿವಾರಣೆ ಹೆಸರಿನಲ್ಲಿ ಜಾರಿಗೊಳಿಸಿದ ಈ ಆದೇಶ ಮೇಲ್ನೋಟಕ್ಕೆ ಸರಿ ಕಾಣಬಹುದು. ಆದರೆ ವೇಗವಾಗಿ ಸಾಗುವ ವಾಹನಗಳಿಗೆ ಅನುವು ಮಾಡಿಕೊಡಲು ಬಡವರು ಪ್ರಯಾಣಿಸುವ ವಾಹನಗಳಿಗೆ ನಿರ್ಬಂಧ ಹೇರುವುದು ಸಾಮಾಜಿಕ ತಾರತಮ್ಯದ ಇನ್ನೊಂದು ವರಸೆ.

ಸಂವಿಧಾನದ ಪೀಠಿಕೆಯಲ್ಲಿಯೇ ತಿಳಿಸಿರುವ ಪ್ರಕಾರ ನಮ್ಮ ಪ್ರಜಾಸತ್ತೆಯಲ್ಲಿ ಸಮಪಾಲು, ಸಮ ಬಾಳು ತಿರುಳಿನ ಸಮಾಜವಾದದ ಆಶಯವೂ ಇದೆ. ನೆಲದ ಕಾನೂನುಗಳು ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂತೆ ಕಟ್ಟಕಡೆಯ ಪ್ರಜೆಗೂ ಸರಕಾರಿ ಸೌಲಭ್ಯಗಳೂ ದಕ್ಕುವಂತೆ ನೋಡಿ ಕೊಳ್ಳಬೇಕಾದುದು ಸರಕಾರದ ಕರ್ತವ್ಯ.

ಸಂವಿಧಾನ ನಿರ್ಮಾತೃ ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಯಂತೆ ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವ ಉದ್ದೇಶದಿಂದಲೇ ಸರಕಾರ ಶೋಷಿತ ವರ್ಗಕ್ಕೆ ವಿಶೇಷವಾದ ಸವಲತ್ತುಗಳನ್ನು ಕೊಡುತ್ತಿದೆ. ಹಾಗೆಯೇ ಮೀಸಲು ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

ಹೀಗಿರುವಾಗ ಸಾರ್ವಜನಿಕ ರಸ್ತೆಯಲ್ಲಿ ಸಂಚರಿಸಲು ಕೆಲವರಿಗಷ್ಟೇ ಅನುಮತಿ ನೀಡಿ ಇನ್ನುಳಿದವರನ್ನು ನಿರ್ಬಂಧಿಸುವುದು ಹೊಸ ಬಗೆಯ ಅಸಮಾನತೆ ಸಾರ್ವಜನಿಕ ಸ್ಥಳಗಳಲ್ಲಿ ಜಾತಿ, ಲಿಂಗ, ಬಣ್ಣ, ಅಂತಸ್ತಿನ ಆಧಾರದಲ್ಲಿ ಯಾವುದೇ ತಾರತಮ್ಯ ಎಸಗುವುದು ಈ ನೆಲದ ಕಾನೂನಿನ ಪ್ರಕಾರ ಕ್ರಿಮಿನಲ್ ಅಪರಾಧ. ಹಾಗಿದ್ದರೆ ಈ ಬಗೆಯ ತಾರತಮ್ಯವೂ ಕ್ರಿಮಿನಲ್ ಅಪರಾಧ ಎನಿಸುವುದಿಲ್ಲವೇ? ಈ ಪ್ರಶ್ನೆಗೆ ಕೇಂದ್ರ ಮತ್ತು ರಾಜ್ಯದಲ್ಲಿ ಕುಳಿತ ನಮ್ಮ ಆಡಳಿತಾರೂಢರು ಉತ್ತರಿಸಬೇಕಾಗಿದೆ.

ಸಾರ್ವಜನಿಕರ ನೆಲವನ್ನು ಬಳಸಿದ, ಸರಕಾರದ ದುಡ್ಡಿನಲ್ಲಿ ನಿರ್ಮಾಣಗೊಂಡ ರಸ್ತೆಗಳು ಸಾರ್ವಜನಿಕ ರಸ್ತೆಗಳೇ ಹೊರತು ಇವು ಖಾಸಗಿ ರಸ್ತೆಗಳಾಗಲು ಸಾಧ್ಯವಿಲ್ಲ. ಆದರೆ ಸಾರ್ವಜನಿಕ ರಸ್ತೆಗಳನ್ನು ಕೆಲವರಿಗಷ್ಟೇ ಮೀಸಲಿಡುವ ಸೇವಾತಾರತಮ್ಯ ನೀತಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಸಮಾನ ಆದ್ಯತೆ ನೀಡುತ್ತಿವೆ. ಹೀಗಾಗಿ ಹೊಸದಾಗಿ ಕಟ್ಟಿದ್ದೆಲ್ಲವೂ ಉಳ್ಳವರಿಗೆ ಸೀಮಿತವಾಗುತ್ತಿವೆ. ದೇಶಾದ್ಯಂತ ರಸ್ತೆಗಳ ಅಗಲೀಕರಣಕ್ಕೆ ಮುಂದಾದಾಗ, ಬೆಂಗಳೂರಿನಂತಹ ನಗರಗಳಲ್ಲಿ–ಓವರ್‌ಗಳನ್ನು ಕಟ್ಟಿದಾಗ, ಮೆಟ್ರೋಗಳನ್ನು ಅನುಷ್ಠಾನಕ್ಕೆ ತಂದಾಗ ಲಕ್ಷಾಂತರ ಮಂದಿ ಸಾರ್ವಜನಿಕರ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ.

ಸರಕಾರ ಭೂಸ್ವಾಧೀನದ ಪ್ರಕಟಣೆ ಹೊರಡಿಸಿದಾಗ, ಸಾರ್ವಜನಿಕ ಹಿತಾಸಕ್ತಿಯಿಂದ ಭೂಸ್ವಾಧೀನ ಮಾಡಲಾಗುತ್ತಿದೆ ಎಂದೇ ಜಾಹೀರಾತು ನೀಡಲಾಗಿತ್ತು. ನಾಗರಿಕರಿಗೆ ಹೆಚ್ಚಿನ ಸವಲತ್ತು ನೀಡುವ ಹೆಸರಿನಲ್ಲಿ ನಿರ್ಮಾಣವಾದ, ದಿನವೂ ಸಾವಿರಾರು ಜನರು ಓಡಾಡುವ ರಸ್ತೆಗಳು ಸಾರ್ವಜನಿಕ ರಸ್ತೆಗಳಾಗಿವೆಯೇ ಖಾಸಗಿ ರಸ್ತೆಗಳಾಗಲು ಸಾಧ್ಯವಿಲ್ಲ. ಈ ಸೌಲಭ್ಯವನ್ನು ಹೊಂದುವ ಹಕ್ಕು ಎಲ್ಲ ನಾಗರಿಕರಿಗೂ ಇದೆ. ಸಂಚಾರಿ ಸುರಕ್ಷತೆ ಮತ್ತು ವಾಹನ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಯಾವುದೇ ನಿಯಮಗಳು ಉಳ್ಳವರು ಮತ್ತು ಇಲ್ಲದವನ್ನು ಪ್ರತ್ಯೇಕಿಸುವ ಹೊಸ ಬಗೆಯ ಧನಭೇದ ನೀತಿಯಾಗಬಾರದು.

ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸರಕಾರ ದೇಶದಲ್ಲಿ ಸ್ವರ್ಣ ಚತುಷ್ಪಥ ರಸ್ತೆಗಳ ನಿರ್ಮಾಣಕ್ಕೆ ಮುಂದಾದಾಗ ದೇಶದಲ್ಲಿ ಅಭಿವೃದ್ಧಿಯ ಹೊಸ ಪರ್ವ ಶುರುವಾಗಿದ್ದು ನಿಜ. ದೇಶದ ಮೂಲಸೌಕರ್ಯ ಅಭಿವೃದ್ಧಿಗೆ ಸರಕಾರದ ಬಳಿ ಹಣಕಾಸು ಕೊರತೆಯಾದಾಗ ಈ ರಸ್ತೆಗಳ ನಿರ್ಮಾಣಕ್ಕೆ ಬಿಒಟಿ ನೀತಿ (ಬಿಲ್ಡ್, ಓಪರೇಟ್ ಆಂಡ್ ಟ್ರಾನ್ಸ್‌ಫರ್) ನೀತಿಯನ್ನು ಅಳವಡಿಸಿಕೊಳ್ಳಲಾಯಿತು. ಈ ನೀತಿಯಡಿ ನಿರ್ಮಾಣಗೊಂಡ ರಸ್ತೆಗಳಲ್ಲಿ ಸಂಚರಿಸಲು ಸೇವಾ ಶುಲ್ಕ ಜಾರಿಗೆ ಬಂತು.

ಆರಂಭದಲ್ಲಿ ಜನರು ಇದನ್ನು ವಿರೋಧಿಸಿದರೂ ಬಳಿಕ ಅನಿವಾರ್ಯ ಎಂಬಂತೆ ಒಪ್ಪಿಕೊಂಡರು. ಮುಂದೆ ನೈಸ್ ಮಾದರಿ ರಸ್ತೆಗಳಿಗಾಗಿ ಬೂಟ್ (ಬಿಲ್ಡ್, ಓನ್, ಓಪರೇಟ್ ಆಂಡ್ ಟ್ರಾನ್ಸ್‌ಫರ್) ನೀತಿಯನ್ನು ಜಾರಿಗೊಳಿಸಲಾಯಿತು. ಇದೀಗ ಕೇಂದ್ರ, ರಾಜ್ಯ ಸರಕಾರಗಳು ಜತೆಯಾಗಿ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಆಹ್ವಾನಿಸಿ, ನೀವೇ ಕಟ್ಟಿ, ನೀವೇ ವಸೂಲಿ ಮಾಡಿ ಎಂಬ ಹೈಬ್ರೀಡ್ ಮಾದರಿಯ ಅಭಿವೃದ್ಧಿಗೆ ಜೋತು ಬಿದ್ದಿವೆ. ರಸ್ತೆ, ರೈಲು, ವಿಮಾನ ನಿಲ್ದಾಣ, ಬಂದರುಗಳೆಲ್ಲವೂ ಒಂದೊಂದಾಗಿ ಖಾಸಗಿಯವರ ಸೊತ್ತಾಗುತ್ತಿವೆ.



ಸಾರ್ವಜನಿಕರು ಶತಮಾನಗಳಿಂದ ಮುಕ್ತವಾಗಿ ಓಡಾಡುತ್ತಿದ್ದ ರಸ್ತೆಗಳು ಈಗ ಕೆಲವರಿಗಷ್ಟೇ ಸೀಮಿತವಾಗುತ್ತಿವೆ. ರಸ್ತೆಗಳಲ್ಲಿ ಟೋಲ್ ನೀತಿ ಜಾರಿಗೆ ಬಂದ ತಕ್ಷಣವೇ ಎತ್ತಿನ ಗಾಡಿ, ತಳ್ಳುಗಾಡಿ, ಸೈಕಲ್, ಟಾಂಗಾ, ಸೈಕಲ್ ರಿಕ್ಷಾ ಮುಂತಾದ ಈ ದೇಶದ ಬಡವರ ವಾಹನಗಳನ್ನು ನಿರ್ಬಂಧಿಸಲಾಯಿತು. ಸುರಕ್ಷತೆ ದೃಷ್ಟಿಯಿಂದ ಇದು ಅಗತ್ಯ ಎಂದು ಜನರೂ ಇದಕ್ಕೆ ಒಗ್ಗಿಕೊಂಡರು.

ಈ ಸಂದರ್ಭದಲ್ಲಿ ಇಂತಹ ವಾಹನಗಳಿಗಾಗಿ ಟೋಲ್ ಇಲ್ಲದ ಸರ್ವಿಸ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಸಮಜಾಯಿಷಿ ನೀಡಲಾಯಿತು. ಆದರೆ ಒಂದಷ್ಟು ಕಡೆ ಸರ್ವಿಸ್ ರಸ್ತೆಗಳನ್ನು ನಿರ್ಮಿಸಿ ನಂತರ ಅವುಗಳನ್ನು ಹಾಗೆಯೇ ಬಿಡಲಾಯಿತು. ಕೇವಲ 10 ವರ್ಷಗಳ ಹಿಂದೆ ಬೆಂಗಳೂರು–ಮೈಸೂರು ನಡುವಣ ಹೆದ್ದಾರಿಯಲ್ಲಿ ಕಬ್ಬು ಹೇರಿಕೊಂಡು ನೂರಾರು ಎತ್ತಿನ ಗಾಡಿಗಳು ಓಡಾಡುತ್ತಿದ್ದವು. ಈಗ ಎಕ್ಸ್ ಪ್ರೆಸ್ ಹೆದ್ದಾರಿಯ ಇಕ್ಕೆಲಗಳಲ್ಲಿ ನಿರ್ಮಿಸಲಾದ ಏರು ತಗ್ಗಿನ, ಕಿಲೋ ಮೀಟರ್‌ಗೊಂದು ಹಂಪ್ಸ್ ಹಾಕಿರುವ ಸರ್ವಿಸ್ ರಸ್ತೆಗಳಲ್ಲಿ ಎತ್ತಿನ ಗಾಡಿಗಳು ಬಿಡಿ, ಮೋಟಾರು ಗಾಡಿಗಳೂ ಓಡಾಡುವುದು ಕಷ್ಟ.

ಎತ್ತಿನ ಗಾಡಿಗಳ ಬದಲು ಬಡ ರೈತನೂ ಈಗ ದುಬಾರಿ ಬಾಡಿಗೆ ಕೊಟ್ಟು ಟ್ರ್ಯಾಕ್ಟರ್ ಮೊರೆ ಹೋಗ ಬೇಕಾಗಿದೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಸೂಪರ್ ಎಕ್ಸ್‌ಪ್ರೆಸ್ ಹೆದ್ದಾರಿಗಳಲ್ಲಿ ಎತ್ತಿನ ಗಾಡಿಗಳು ಮಾತ್ರವಲ್ಲ, ರೈತರ ಟ್ರ್ಯಾಕ್ಟರ್‌ಗಳು, ದ್ವಿಚಕ್ರ ವಾಹನಗಳು, ತ್ರಿಚಕ್ರ, ಗೂಡ್ಸ್ ಆಟೋಗಳೂ ಓಡಾಡುವಂತಿಲ್ಲ. ಇಲ್ಲಿ ನಿಧಾನವಾಗಿ ಚಲಿಸುವವರಿಗೆ ಮಾತ್ರವಲ್ಲ, ವೇಗವಾಗಿ ಸಾಗುವವರಿಗೂ ನಿರ್ಬಂಧಗಳಿವೆ. ಮೋಟಾರು ವಾಹನಗಳನ್ನೂ ಅವುಗಳ ಗಾತ್ರ, ಚಕ್ರ, ವಿನ್ಯಾಸವಷ್ಟೇ ಅಲ್ಲ, ಅವುಗಳ ಉಪಯೋಗದ ಆಧಾರದಲ್ಲಿಯೂ ನಿರ್ಬಂಧಿಸಲಾಗುತ್ತಿದೆ.

ರಾಜಧಾನಿ ಬೆಂಗಳೂರಿನಲ್ಲೀಗ ಈ ನೀತಿಯ ಮುಂದುವರಿದ ಸರಣಿ ಆರಂಭವಾಗಿದೆ. ಮೊನ್ನೆ ತನಕ ನಿಧಾನವಾಗಿ ಚಲಿಸುವ ವಾಹನಗಳಿಗಷ್ಟೇ ನಿರ್ಬಂಧ ಹೇರಲಾಗಿದ್ದ ಫ್ಲೈ ಓವರ್‌ಗಳಲ್ಲಿ ಇನ್ನು ದ್ವಿಚಕ್ರ ವಾಹನಗಳು, ತ್ರಿಚಕ್ರ ವಾಹನಗಳೂ ಓಡಾಡುವಂತಿಲ್ಲ, ಗೂಡ್ಸ್ ಆಟೋಗಳು ಚಲಿಸುವಂತಿಲ್ಲ. ಅಂದರೆ ಸಾಮಾನ್ಯ ವ್ಯಕ್ತಿಯೊಬ್ಬ ಬಳಸುವ ವಾಹನ ಈ ರಸ್ತೆಗಳಲ್ಲಿ ನಿಷೇಧಕ್ಕೊಳಗಾಗುತ್ತಿವೆ. ಸಾರ್ವಜನಿಕರ ತೀವ್ರ ವಿರೋಧದ ಬಳಿಕ ಈ ನಿಯಮಗಳಲ್ಲಿ ಒಂದಷ್ಟು ತಿದ್ದುಪಡಿ ಮಾಡಲಾಗಿದೆ. ಆದರೆ ಮುಂದೊಂದು ದಿನ ಈ ನೀತಿ ಕಟ್ಟುನಿಟ್ಟಾಗಿ ಜಾರಿಗೆ ಬರುವುದು ಖಚಿತ.

ಫ್ಲೈ ಓವರ್‌ಗಳಲ್ಲಿ ದ್ವಿಚಕ್ರ ವಾಹನ ಮತ್ತು ಗೂಡ್ಸ್ ಆಟೋಗಳನ್ನು ನಿಷೇಧಿಸಿದ ಮಾತ್ರಕ್ಕೆ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ನಮ್ಮ ಸಂಚಾರಿ ಪೊಲೀಸರ ವಾದವೇ ಹಾಸ್ಯಾಸ್ಪದ. ಎಲೆಕ್ಟ್ರಾನಿಕ್ ಸಿಟಿ ಫ್ಲೈ ಓವರ್‌ನಲ್ಲಿ ದ್ವಿಚಕ್ರ ವಾಹನ ಬಳಸುವವರಲ್ಲಿ ಹೆಚ್ಚಿನವರಲ್ಲಿ ಕಾರುಗಳೂ ಇವೆ. ಆದರೆ ಸಂಚಾರ ದಟ್ಟನೆಯ ಕಾರಣದಿಂದ ಚತುಷ್ಚಕ್ರ ಬಿಟ್ಟು ದ್ವಿಚಕ್ರ ವಾಹನಗಳನ್ನು ಆಶ್ರಯಿಸಿದ್ದಾರೆ.

ಸ್ಕೂಟರ್, ಬೈಕ್‌ಗೆ ನಿಷೇಧ ಹೇರಿದ ಮರುದಿನದಿಂದಲೇ ಇವರೆಲ್ಲರೂ ಕಾರು ಹತ್ತಿ ಬರತೊಡಗಿದರೆ ಸಂಚಾರ ದಟ್ಟನೆ ಇನ್ನಷ್ಟೂ ಬಿಗಡಾಯಿಸುತ್ತದೆ. ಇನ್ನು ಗೂಡ್ಸ್ ಆಟೋ, ಲಾರಿಗಳು, ದ್ವಿಚಕ್ರ ವಾಹನಗಳು ಸರ್ವಿಸ್ ರಸ್ತೆಯಲ್ಲಿಯೇ ಸಂಚರಿಸಿದರೂ – ಓವರ್ ಕೆಳಭಾಗದಲ್ಲಿ ವಾಹನ ದಟ್ಟನೆ ನಿರ್ಮಾಣವಾಗುವುದು ಖಚಿತ. ಸರ್ವಿಸ್ ರಸ್ತೆ ಬಂದ್ ತಕ್ಷಣವೇ – ಓವರ್ ಸಂಚಾರವೂ ಸ್ಥಗಿತ ಗೊಳ್ಳುತ್ತದೆ. ಈ ಬಗ್ಗೆ ಯೋಚಿಸದ ಬೆಂಗಳೂರಿನ ಸಂಚಾರಿ ಪೊಲೀಸರು ನಿರ್ದಿಷ್ಟ ವಾಹನಗಳನ್ನು ನಿಷೇಧಿಸಲು ಮುಂದಾಗಿದ್ದಾರೆ.

ಈ ಆದೇಶದ ಸಾಮಾಜಿಕ ತಾರತಮ್ಯತೆಯನ್ನು ಬದಿಗಿಟ್ಟರೂ ಇವುಗಳ ಪ್ರಾಯೋಗಿಕ ಅನುಕೂಲತೆ ಅಷ್ಟಕ್ಕಷ್ಟೇ. ಎಲ್ ಆಂಡ್ ಟಿ ಸಂಸ್ಥೆಯು ಮೈಸೂರು ರಸ್ತೆಯಲ್ಲಿ ಬೆಂಗಳೂರಿನ ಮೊಟ್ಟ ಮೊದಲ ಫ್ಲೈ ಓವರ್ (ಬಿಜಿಎಸ್ ಮೇಲು ಸೇತುವೆ) ನಿರ್ಮಿಸಿದಾಗ ಪಾದಚಾರಿ ರಸ್ತೆಗೂ ಅವಕಾಶ ನೀಡಿತ್ತು. ಆ ಬಳಿಕ ನಿರ್ಮಾಣವಾದ ಯಾವ – ಓವರ್‌ನಲ್ಲೂ ಪಾದಚಾರಿಗಳಿಗೆ ಸಂಚರಿಸಲು ಅವಕಾಶವೇ ಇಲ್ಲ.

ನಮ್ಮ ಯೋಜನಾ ನಿರ್ಮಾತೃಗಳು ಮೇಲುರಸ್ತೆಗಳ ನಿರ್ಮಾಣ ಸಂದರ್ಭದಲ್ಲಿ ದ್ವಿಚಕ್ರ ಸಂಚಾರಕ್ಕೆ ಪ್ರತ್ಯೇಕ ಲೇನ್ ಅವಕಾಶ ಏಕೆ ಕೊಟ್ಟಿಲ್ಲ ಎನ್ನುವುದು ಈಗಲೂ ಕೇಳಬೇಕಾದ ಪ್ರಶ್ನೆ. ಬಂಡವಾಳ ಶಾಹಿಯನ್ನೇ ಹೊದ್ದು ಮಲಗಿದ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಕೂಡ ರಸ್ತೆಗಳ ವಿಚಾರಕ್ಕೆ ಬಂದರೆ ಪಾದಚಾರಿಗಳು, ವೃದ್ಧರಿಗೆ, ಅಂಗವಿಕಲರ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುತ್ತದೆ.

ಪ್ರತಿಯೊಂದು ರಸ್ತೆಯಲ್ಲೂ ಪ್ರತ್ಯೇಕ ಸೈಕಲ್ ಲೇನ್‌ಗಳಿವೆ. ಸೂಪರ್ ಎಕ್ಸ್‌ಪ್ರೆಸ್ ಹೆದ್ದಾರಿಗಳಾದರೂ ಅಲ್ಲಿನ ರಸ್ತೆಗಳಲ್ಲಿ ಸೈಕಲ್ ಸವಾರರನ್ನು, ದ್ವಿಚಕ್ರ ವಾಹನ ಸವಾರರನ್ನು ರಸ್ತೆಗಿಳಿಯದಂತೆ ನಿರ್ಬಂಧಿಸಿಲ್ಲ. ಆದರೆ ಎಲ್ಲರಿಗೂ ಮೋಟಾರು ವಾಹನಗಳ ನಿಯಮ ಪಾಲನೆಯನ್ನು ಕಡ್ಡಾಯ ಗೊಳಿಸಲಾಗಿದೆ. ನಮ್ಮಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗದ ಅಧಿಕಾರಿಗಳು ಮತ್ತಷ್ಟು ನಿಯಮಗಳನ್ನು ಜಾರಿಗೊಳಿಸುವ ಮೂಲಕ ತಮ್ಮ ಜೇಬು ತುಂಬಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಿದ್ದಾರೆ.

ನಮ್ಮ ತಿಳಿಗೇಡಿ ನಾಯಕರು ಅಧಿಕಾರಿಗಳ ಮಾತಿಗೆ ತಲೆಯಾಡಿಸುತ್ತಿದ್ದಾರೆ. ಬೆಂಗಳೂರನ್ನು ಜಾಗತಿಕ ನಗರವಾಗಿ ರೂಪಿಸಲು ಹೊರಟಿರುವ ನಮ್ಮ ಸಿಎಂ ಡಿ.ಕೆ ಶಿವಕುಮಾರ್ ಅವರು ನಗರದ ನಾಲ್ಕು ಮೂಲೆಗಳಲ್ಲಿಯೂ ಸುರಂಗ ರಸ್ತೆ ನಿರ್ಮಾಣ ಮಾಡಲು ಹೊರಟಿದ್ದಾರೆ. ಆರೇಳು ಕಿಲೋ ಮೀಟರ್ ಉದ್ದದ ಈ ಸುರಂಗ ರಸ್ತೆಗಳನ್ನು ಬಳಸಬೇಕಾದರೆ ಸದ್ಯದ ಅಂದಾಜು ಪ್ರಕಾರವೇ 600 ರು. ಗಳಿಗಿಂತ ಹೆಚ್ಚಿನ ಟೋಲ್ ಕಟ್ಟಬೇಕು. ಈ ರಸ್ತೆಗಳಲ್ಲಿ ಓಡಾಡಬೇಕಾದರೆ ಕೇವಲ ಕಾರಿದ್ದರೆ ಸಾಲದು.

ಜೇಬು ದೊಡ್ಡದಿರಬೇಕು. ಬೆಂಗಳೂರಿನ ಶೇ.5ಕ್ಕಿಂತಲೂ ಕಡಿಮೆ ವರ್ಗದ ಜನರಿಗಷ್ಟೇ ಈ ಸುರಂಗ ಮಾರ್ಗಗಳಲ್ಲಿ ಓಡಾಡಲು ಸಾಧ್ಯ. ಅಭಿವೃದ್ಧಿಯೆಂದರೆ ಕೇವಲ ವೇಗವಾಗಿ ಚಲಿಸುವ ದುಬಾರಿ ಕಾರುಗಳಿಗೆ ಸುಸಜ್ಜಿತ ರಸ್ತೆ ನಿರ್ಮಿಸುವುದಷ್ಟೇ ಅಲ್ಲ. ನಗರ ಮತ್ತು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸುರಕ್ಷಿತ ಮತ್ತು ಸುಲಭ ಸಂಚಾರದ ಹಕ್ಕನ್ನು ಕಲ್ಪಿಸುವುದು ಸರಕಾರದ ಕರ್ತವ್ಯ. ವೇಗದ ವಾಹನಗಳಿಗೆ ಪ್ರತ್ಯೇಕ ಪಥಗಳನ್ನು ಕಲ್ಪಿಸುವುದು ತಪ್ಪಲ್ಲ.

ಆದರೆ ಮೂಲಸೌಕರ್ಯಗಳಿಂದ ಸಮಾಜದ ಬಹುಸಂಖ್ಯಾತ ಬಡ ಮತ್ತು ಮಧ್ಯಮ ವರ್ಗವನ್ನು ಹೊರಗಿಡುವುದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧ. ಸರಕಾರಗಳು ಯೋಜನಾ ಹಂತದ ಸಮಗ್ರ, ಹಾಗೂ ಸಮಾನ ಅವಕಾಶ ನೀಡುವ ಸಾರಿಗೆ ನೀತಿಗಳನ್ನು ರೂಪಿಸಬೇಕಿದೆ. ಇಲ್ಲವಾದರೆ ಅಭಿವೃದ್ಧಿ ಎಂಬುದು ಕೇವಲ ಉಳ್ಳವರ ಆಸ್ತಿಯಾಗಿ ಉಳಿಯಲಿದೆ. ನಮ್ಮ ಶಿಕ್ಷಣ ವ್ಯವಸ್ಥೆ ಈಗಾಗಲೇ ದೊಡ್ಡ ಮಟ್ಟದ ಸಾಮಾಜಿಕ ಕಂದರವನ್ನು ಹುಟ್ಟು ಹಾಕಿದೆ. ಈಗ ಗುಂಡಿ ಬಿದ್ದ ರಸ್ತೆಗಳೂ ಸಾಮಾಜಿಕ ಮತ್ತು ಆರ್ಥಿಕ ಕಂದರವನ್ನು ಸೃಷ್ಟಿಸದಂತೆ ನೋಡಿಕೊಳ್ಳಬೇಕಾಗಿದೆ.

**– ಲೋಕೇಶ್ ಕಾಯರ್ಗ**

### ಈ ನೀತಿ ಕಟ್ಟು ನಿಟ್ಟಾಗಿ ಜಾರಿಗೆ ಬರುವುದು ಖಚಿತ.

- ಫ್ಲೈ ಓವರ್‌ಗಳಲ್ಲಿ ದ್ವಿಚಕ್ರ ವಾಹನ ಮತ್ತು ಗೂಡ್ಸ್ ಆಟೋಗಳನ್ನು ನಿಷೇಧಿಸಿದ ಮಾತ್ರಕ್ಕೆ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ನಮ್ಮ ಸಂಚಾರಿ ಪೊಲೀಸರ ವಾದವೇ ಹಾಸ್ಯಾಸ್ಪದ.
- ಎಲೆಕ್ಟ್ರಾನಿಕ್ ಸಿಟಿ ಫ್ಲೈ ಓವರ್‌ನಲ್ಲಿ ದ್ವಿಚಕ್ರ ವಾಹನ ಬಳಸುವವರಲ್ಲಿ ಹೆಚ್ಚಿನವರಲ್ಲಿ ಕಾರುಗಳೂ ಇವೆ.
- ಆದರೆ ಸಂಚಾರ ದಟ್ಟನೆಯ ಕಾರಣದಿಂದ ಚತುಷ್ಚಕ್ರ ಬಿಟ್ಟು ದ್ವಿಚಕ್ರ ವಾಹನಗಳನ್ನು ಆಶ್ರಯಿಸಿದ್ದಾರೆ.
- ಸ್ಕೂಟರ್, ಬೈಕ್‌ಗೆ ನಿಷೇಧ ಹೇರಿದ ಮರುದಿನದಿಂದಲೇ ಇವರೆಲ್ಲರೂ ಕಾರು ಹತ್ತಿ ಬರತೊಡಗಿದರೆ ಸಂಚಾರ ದಟ್ಟನೆ ಇನ್ನಷ್ಟೂ ಬಿಗಡಾಯಿಸುತ್ತದೆ.
- ಇನ್ನು ಗೂಡ್ಸ್ ಆಟೋ, ಲಾರಿಗಳು, ದ್ವಿಚಕ್ರ ವಾಹನಗಳು ಸರ್ವಿಸ್ ರಸ್ತೆಯಲ್ಲಿಯೇ ಸಂಚರಿಸಿದರೂ – ಓವರ್ ಕೆಳಭಾಗದಲ್ಲಿ ವಾಹನ ದಟ್ಟನೆ ನಿರ್ಮಾಣವಾಗುವುದು ಖಚಿತ.
- ಸರ್ವಿಸ್ ರಸ್ತೆ ಬಂದ್ ತಕ್ಷಣವೇ – ಓವರ್ ಸಂಚಾರವೂ ಸ್ಥಗಿತ ಗೊಳ್ಳುತ್ತದೆ.

### ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಜಲಸಂಪನ್ಮೂಲ ಸಚಿವ ಎಚ್ಚರಿಕೆ

# ಕೆಲಸ ಮಾಡದಿದ್ರೆ ನಿರ್ದಾಕ್ಷಿಣ್ಯವಾಗಿ ಅಮಾನತು

• ಪ್ರಜೋದಯ ವರದಿ

**ಬೆಂಗಳೂರು:** ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿನ ಯೋಜನೆಗಳು, ಕುಡಿಯುವ ನೀರಿನ ಸಮಸ್ಯೆ ಹಾಗು ಮೇಕೆದಾಟು ಯೋಜನೆ ಕುರಿತಂತೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಕಾರ್ಯೋನ್ಮುಖರಾಗಬೇಕು. ಕೆಲಸ ಮಾಡದ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಅಮಾನತು ಮಾಡಲಾಗುವುದು ಎಂದು ಜಲ ಸಂಪನ್ಮೂಲ ಸಚಿವ ಎನ್. ಚಲುವರಾಯ ಸ್ವಾಮಿ ಅವರು ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನ ಕೃಷ್ಣಾ ಭಾಗ್ಯ ಜಲ ನಿಗಮದ ಸಭಾಂಗಣದಲ್ಲಿ ಬುಧವಾರ ಕಾವೇರಿ ನೀರಾವರಿ ನಿಗಮದ (ಸಿಎನ್‌ಎನ್) ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದ ಡ್ಯಾಂಗಳಲ್ಲಿನ ನೀರಿನ ಪ್ರಮಾಣ, ಡೆಡ್ ಸ್ಟೋರೇಜ್, ತಮಿಳುನಾಡಿಗೆ ಹರಿಸಿದ ಹಾಗು ಬಿಳಿಗುಂಡ್ಲುವಿನಲ್ಲಿ ದಾಖಲಾದ ನೀರಿನ ಪ್ರಮಾಣ, ಅಚ್ಚುಕಟ್ಟು ವ್ಯಾಪ್ತಿಯ ಪರಿಸ್ಥಿತಿ ಸೇರಿ ಪ್ರತಿಯೊಂದು ಮಾಹಿತಿಯನ್ನು ದಿನಕ್ಕೆರೆಡು ಬಾರಿ ಕಡ್ಡಾಯವಾಗಿ ಒದಗಿಸುವಂತೆ ಸೂಚಿಸಿದರು.

ಬೇಸಿಗೆ ಮುಗಿಯುವವರೆಗೂ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ನಿಗಮದ ವ್ಯಾಪ್ತಿಗೆ ಸೇರುವ ಒಟ್ಟು 23 ಸಣ್ಣ ಅಣೆಕಟ್ಟುಗಳ ಪೈಕಿ ಮಂದಗೆರೆ ಹಾಗು ಹೇಮಗಿರಿ ಅಣೆಕಟ್ಟುಗಳು



ಬರೋಬ್ಬರಿ 800 ವರ್ಷಗಳಷ್ಟು ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿವೆ. ತಕ್ಷಣವೇ ಇವುಗಳ ದುರಸ್ತಿಗೆ ಅಂದಾಜು ಪಟ್ಟಿ ಸಿದ್ಧಪಡಿಸಿ, ನೀರಿನ ಸೋರಿಕೆ ತಡೆಯಬೇಕು. ಜೊತೆಗೆ ಹೇಮಾವತಿ ನೀರನ್ನು ಕುಣಿಗಲ್ ಮಾರ್ಗವಾಗಿ ಹುಲಿಯೂರುದುರ್ಗದವರೆಗೆ ಹರಿಸಲು ಬಾಕಿ ಇರುವ 32 ಕಿ.ಮೀ. ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಿರ್ದೇಶನ ನೀಡಿದರು.

**ಮೇಕೆದಾಟು ಯೋಜನೆಯೇ ಶಾಶ್ವತ ಪರಿಹಾರ**

ಕಳೆದ ಐದು ವರ್ಷಗಳಲ್ಲಿ ಸುಮಾರು 112.88 ಟಿಎಂಸಿ ಹೆಚ್ಚುವರಿ ಕಾವೇರಿ ನೀರು ಸಮುದ್ರ ಪಾಲಾಗಿದೆ. ಹೀಗಾಗಿ ಬರಗಾಲದಲ್ಲೂ ಎರಡು ರಾಜ್ಯಗಳಿಗೆ ಅನುಕೂಲವಾಗುವ ಹಾಗು ಕನಿಷ್ಠ 22 ಟಿಎಂಸಿ ಕುಡಿಯುವ ನೀರನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಮೇಕೆದಾಟು ಯೋಜನೆಯೊಂದೇ ಶಾಶ್ವತ ಪರಿಹಾರವಾಗಿದೆ ಎಂದರು.

ತಮಿಳುನಾಡು ಕೇಳಿದ್ದ ನೀರಿನ ಹರಿವಿನ ಕುರಿತ ಪ್ರಶ್ನೆಗಳಿಗೆ ಎಸ್‌ಒಪಿ ಕಳುಹಿಸುವ ಮೂಲಕ ಈಗಾಗಲೇ ಸಮರ್ಪಕ ಉತ್ತರ ನೀಡಿ ಗೊಂದಲ ಬಗೆಹರಿಸಲಾಗಿದೆ. ಕೇಂದ್ರ ಜಲ ಆಯೋಗವೂ (ಸಿಡಬ್ಲ್ಯುಸಿ) ಸಕಾರಾತ್ಮಕವಾಗಿ ಸ್ಪಂದಿಸಿದೆ. ಮುಖ್ಯಮಂತ್ರಿ ಮೂಲಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ, ರಾಜ್ಯದ ಎಲ್ಲಾ ಸಂಸದರ ಸಹಕಾರದೊಂದಿಗೆ ಪ್ರಧಾನಿಗಳಿಗೆ ಯೋಜನೆಯ ಲಾಭವನ್ನು ಮನವರಿಕೆ ಮಾಡಿಕೊಡಲಾಗುವುದು. ಮುಳುಗಡೆಯಾಗುವ ಪ್ರದೇಶಕ್ಕೆ ಪರ್ಯಾಯ ಭೂಮಿ ಸಿಕ್ಕ ತಕ್ಷಣ ಕಾಮಗಾರಿ ಆರಂಭಿಸಿ

**ಕಾವೇರಿ ಜಲಾನಯನ ಪ್ರದೇಶದ ವಿಸ್ತಾರ**

ಒಟ್ಟು 11 ಜಿಲ್ಲೆಗಳಲ್ಲಿ 34,273 ಚದರ ಕಿ.ಮೀ. ವಿಸ್ತೀರ್ಣದಲ್ಲಿ ವ್ಯಾಪಿಸಿರುವ ಕಾವೇರಿ ಕಣಿವೆಯಲ್ಲಿ ನ್ಯಾಯಾಧಿಕರಣದ ತೀರ್ಪಿನಂತೆ 18.85 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿಯಡಿ 15.55 ಲಕ್ಷ ಎಕರೆ ಹಾಗು ಸಣ್ಣ ನೀರಾವರಿಯಡಿ 3.30 ಲಕ್ಷ ಎಕರೆ ಪ್ರದೇಶ ಸೇರಿದೆ. ಈ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು, ಆಧುನೀಕರಣ ಮತ್ತು ನಿರ್ವಹಣೆ ಮಾಡುವುದು ಕಾವೇರಿ ನೀರಾವರಿ ನಿಗಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಮೂರು ವರ್ಷದೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಯೋಜನೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ತಕ್ಷಣ ಡಿಜಿಟಲೀಕರಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಭಿವೃದ್ಧಿ ಕಾರ್ಯಗಳಲ್ಲಿ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ, ರಾಜ್ಯದ ಎಲ್ಲಾ ಶಾಸಕರಿಗೂ ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯದೆ ಸಮಾನವಾಗಿ ತಲಾ ಎರಡರಿಂದ ಮೂರು ನೀರಾವರಿ ಕಾಮಗಾರಿಗಳನ್ನು ನೀಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಹಾರಂಗಿ ಹಾಗೂ ಕಬಿನಿ ವ್ಯಾಪ್ತಿಯ ಅಪೂರ್ಣ ಕಾಮಗಾರಿಗಳನ್ನು ಮುಗಿಸಬೇಕು. ಶ್ರೀರಂಗ ಏತ ನೀರಾವರಿ ಯೋಜನೆಗೆ ಈಗಾಗಲೇ ಖರ್ಚಾಗಿರುವ ಹಣವನ್ನು ಸದ್ಬಳಕೆ ಮಾಡಿಕೊಂಡು, ಎಕ್ಸ್‌ಪ್ರೆಸ್ ಕೆನಾಲ್ ಮೂಲಕ ಶೀಘ್ರವೇ ನೀರು ಹರಿಸಲು ಕ್ರಮಕೈಗೊಳ್ಳಬೇಕು. ಜನಪ್ರತಿನಿಧಿಗಳೊಂದಿಗೆ ಸೌಹಾರ್ದ ಮಾತುಕತೆ ನಡೆಸಿ ಯೋಜನೆಯ ಮಹತ್ವ ವಿವರಿಸುವಂತೆ ಹಾಗೂ ರಾಜಕೀಯ ಒತ್ತಡಗಳಿಗೆ ಮಣಿದು ಯೋಜನೆಗಳನ್ನು ಸ್ಥಗಿತಗೊಳಿಸಬಾರದು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಡ್ಯಾಂಗಳ ಪುನಶ್ಚೇತನ ಹಾಗು ಅಗತ್ಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಪ್ರತ್ಯೇಕ ಸಭೆ ನಡೆಸಿ, ಪರಿಹಾರ ಒದಗಿಸಲು ಕ್ರಮ ವಹಿಸಲಾಗುವುದು. ನಿಗಮದಲ್ಲಿ ಖಾಲಿ ಇರುವ ಶೇ.57ರಷ್ಟು ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ ಕುಲಕರ್ಣಿ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಸೇರಿದಂತೆ ನಿಗಮದ ಹಿರಿಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

## ಸೆ.18-19 ರಂದು ರಾಜ್ಯಕ್ಕೆ ಅಮಿತ್ ಶಾ ಭೇಟಿ

• ಪ್ರಜೋದಯ ವರದಿ

**ಬೆಂಗಳೂರು :** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದು, ಸೆ.18 ಮತ್ತು 19 ರಂದು ಅವರು ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಅವರ ಆಪ್ತರ ಮೇಲೆ ಇಡಿ ದಾಳಿ ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರಿ ವಾಕ್ಸಮರಕ್ಕೆ ಕಾರಣವಾಗಿರುವಾಗಲೇ ಕೇಂದ್ರ ಸಚಿವರ ರಾಜ್ಯ ಭೇಟಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಕೇಂದ್ರ ಸಚಿವ ಅಮಿತ್ ಶಾ ಅವರು ಎರಡು ದಿನಗಳ ರಾಜ್ಯ ಭೇಟಿ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಗೂ ಭೇಟಿ ನೀಡುತ್ತಿದ್ದು, ರಾಜ್ಯ ರಾಜಕಾರಣದಲ್ಲಿ ಬೆಳಗಾವಿ ರಾಜಕಾರಣ ತನ್ನದೇ ಆದ ಮಹತ್ವ ಹೊಂದಿದೆ. ಹಾಗಾಗಿ ಅಮಿತ್ ಶಾ ರವರ ಬೆಳಗಾವಿ ಭೇಟಿ ಸಹ ಕುತೂಹಲ ಮೂಡಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎರಡು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ಈ ಸಂದರ್ಭದಲ್ಲಿ ಅವರು ಬೆಳಗಾವಿಯಲ್ಲಿ ಪಕ್ಷ ಸಂಘಟನೆ ಮತ್ತಿತರ ವಿಚಾರಗಳ ಬಗ್ಗೆಯೂ ಬಿಜೆಪಿ ಮುಖಂಡರ ಜತೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ.



ಈ ತಿಂಗಳ 18 ರಂದು ರಾತ್ರಿ ದೆಹಲಿಯಿಂದ ನೇರವಾಗಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅಮಿತ್ ಶಾ ಅವರು, ಅಂದು ಅಲ್ಲಿಯೇ ವಾಸ್ತವ್ಯ ಹೂಡಲಿದ್ದು, ಸೆ. 19 ರಂದು ಹುಬ್ಬಳ್ಳಿಯ ಗಬ್ಬೂರು ಬೈಪಾಸ್ ಬಳಿ ಕೆಎಲ್‌ಇ ಸಂಸ್ಥೆ ನೂತನವಾಗಿ ನಿರ್ಮಿಸಲಿರುವ 1500 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ಮತ್ತು ನೂತನ ವೈದ್ಯಕೀಯ ಮಹಾವಿದ್ಯಾಲಯ ಕಟ್ಟಡವನ್ನು ಲೋಕಾರ್ಪಣೆ ಮಾಡುವರು

ಈ ಕಾರ್ಯಕ್ರಮದ ನಂತರ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಯಕ್ಸಾಂಬಾ ಗ್ರಾಮದಲ್ಲಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾ ಸಾಹೇಬ್ ಜೊಲ್ಲೆ ಒಡೆತನದ ಬೀರೇಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡ ಉದ್ಘಾಟಿಸುವರು.

ಈ ಸಂದರ್ಭದಲ್ಲಿ ಅಮಿತ್ ಶಾ ಅವರು ಬೆಳಗಾವಿ ಸೇರಿ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷ ಸಂಘಟನೆ ಬಗ್ಗೆ ಬಿಜೆಪಿ ನಾಯಕರೊಂದಿಗೆ ಚರ್ಚೆ ನಡೆಸುವರೆಂದು ಹೇಳಲಾಗಿದೆ.

## ಯುಪಿಐ ಶುಲ್ಕ: ಟ್ರಂಪ್ ಮುಂದೆ ಶರಣಾಗಬೇಡಿ

» ಮೊದಲನೇ ಪುಟದಿಂದ

ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲಾಗುತ್ತದೆಂದು ಹೇಳಿಕೆ ತಿಳಿಸಿದೆ.

ಅಮೇರಿಕಾದ ಕಂಪನಿಗಳಾದ ವೀಸಾ ಮತ್ತು ಮಾಸ್ಟರ್‌ಕಾರ್ಡ್‌ಗೆ ಹಾನಿಯುಂಟಾಗುತ್ತಿದೆ ಎಂದು ಅಮೇರಿಕಾ ದೂರು ನೀಡಿದ್ದರಿಂದ ಸರ್ಕಾರ ಯುಪಿಐ, ರುಪೇ ಮೇಲೆ ಶುಲ್ಕವನ್ನು ಪರಿಚಯಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದ ನಂತರ ಸ್ಪಷ್ಟೀಕರಣ ನೀಡಿದೆ.

ಅ.15 ರಿಂದ, 2,000ಕ್ಕಿಂತ ಹೆಚ್ಚಿನ ಯುಪಿಐ ವಹಿವಾಟಿನ ಮೇಲೆ ಶೇ 0.4 ರಷ್ಟು ಎಂಡಿಆರ್ ಶುಲ್ಕ ವಿಧಿಸುತ್ತವೆ. ಆದಾಗ್ಯೂ, ಇದನ್ನು ವ್ಯಾಪಾರಿಗಳು ಪಾವತಿಸುತ್ತಾರೆ ಮತ್ತು ಗ್ರಾಹಕರು ಇದರಿಂದ ತೊಂದರೆಗೊಳಗಾಗುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಹೇಳಿದೆ.



**ಬೆಂಗಳೂರಿನ ಆರ್. ವಿ.ಕಾಲೇಜ್ ಆಫ್ ಆರ್ಕಿಟೆಕ್ಚರ್‌ನಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ರಾಜ್ಯಮಟ್ಟದ ಅಂತರ್ ಕಾಲೇಜು ಕರಾಟೆ ಪಂದ್ಯಾವಳಿಯ 75 ಕೆ.ಜಿ. ಒಳಗಿನ ವಿಭಾಗದಲ್ಲಿ ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ವಿದ್ಯಾರ್ಥಿ ಧನುಷ್ ಗೌಡ.ಪಿ ಅವರು ದ್ವಿತೀಯ ಸ್ಥಾನ ಪಡೆದ್ದಾರೆ.**

## ಇಂದು ಕನ್ನಡ ಸಾಹಿತ್ಯದಲ್ಲಿ ಕಾಡು ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ :** ಕನ್ನಡ ವಿಭಾಗ, ಎ.ವಿ.ಕಾಂತಮ್ಮ ಮಹಿಳಾ ಕಾಲೇಜು ವತಿಯಿಂದ ಸೆ.17 ರಂದು ಬೆಳಿಗ್ಗೆ 11-30ಕ್ಕೆ ಕಾಲೇಜಿನ ಸಭಾ ಭವನದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯದಲ್ಲಿ ಕಾಡು ಕಾರ್ಯಕ್ರಮವನ್ನು ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಮಂಡಳಿ ಸಂಚಾಲಕ ಬಸವರಾಜ ಕಲ್ಗುಡಿ ಅವರು ಉದ್ಘಾಟಿಸುವರು. ಕಾಲೇಜು, ಉಪಾಧ್ಯಕ್ಷ ಅರ್ಜುನ್ ಗುರುದೇವ್ ಹಾಗೂ ಎಂಟಿಇಎಸ್ ಕಾರ್ಯದರ್ಶಿ ಜಿ.ಟಿ.ಕುಮಾರ್ ಗೌರವ ಅತಿಥಿಗಳಾಗಿ ಭಾಗವಹಿಸುವರು. ಎಂಟಿಇಎಸ್ ಅಧ್ಯಕ್ಷ ಬಿ.ಆರ್.ಗುರುದೇವ್ ಅವರು ಅಧ್ಯಕ್ಷೀಯನುಡಿಗಳನ್ನು ನುಡಿಯಲ್ಲಿದ್ದಾರೆ.

## ಮೆಕ್ಕಾ ಮೇಲೆ ಹೂಥಿ ಬಂಡುಕೋರರಿಂದ ಡ್ರೋನ್ ದಾಳಿಗೆ ಯತ್ನ

• ಪ್ರಜೋದಯ ವರದಿ

**ರಿಯಾದ್:** ಮುಸ್ಲಿಮರ ಪವಿತ್ರ ಧಾರ್ಮಿಕ ಕ್ಷೇತ್ರ ಮೆಕ್ಕಾ ಮೇಲೆ ಹೂಥಿ ಬಂಡುಕೋರರು ಹಾರಿಸಿದ್ದ ಡ್ರೋನ್ ಅನ್ನು ಹೊಡೆದುರಳಿಸಲಾಗಿದೆ ಎಂದು ಸೌದಿ ಅರೇಬಿಯಾ ಹೇಳಿದೆ. ಈ ದಾಳಿ ಯತ್ನವು ಧಾರ್ಮಿಕ ನಗರ ಮೆಕ್ಕಾದಲ್ಲಿ ಆತಂಕದ ವಾತಾವರಣ ಸೃಷ್ಟಿಸಿದೆ. 2017ರಲ್ಲೂ ಹೂಥಿ ಬಂಡುಕೋರರು ಇದೇ ರೀತಿಯ ದಾಳಿ ಯತ್ನ ನಡೆಸಿದ್ದರು.

ಮಂಗಳವಾರ ಸಂಜೆ ಶತ್ರುಗಳ ಡ್ರೋನ್, ನಿರ್ಬಂಧಿತ ವಾಯುಪ್ರದೇಶ ಪ್ರವೇಶಿಸುವುದಕ್ಕೂ ಮುನ್ನವೇ ರಾಯಲ್ ಸೌದಿ ವಾಯು ರಕ್ಷಣಾ ಪಡೆಗಳು ಅದನ್ನು ತಡೆದು, ಹೊಡೆದುರುಳಿಸಿವೆ ಎಂದು ಸೌದಿ ನೇತೃತ್ವದ ಮೈತ್ರಿಕೂಟದ ವಕ್ತಾರ ತುರ್ಕಿ ಅಲ್ ಮಲಿಕಿ ಹೇಳಿದ್ದಾರೆ.

ಈ ಕೃತ್ಯವು ಭಕ್ತರಲ್ಲಿ ಭಯ ಹುಟ್ಟಿಸುವ, ನಾಗರಿಕರಿಗೆ ಹಾನಿ ಮಾಡುವ ಪ್ರಯತ್ನವಾಗಿದೆ ಎಂದು ಅವರು ಖಂಡಿಸಿದ್ದಾರೆ. ಎರಡು ಪವಿತ್ರ ಮಸೀದಿಗಳು ಹಾಗೂ ಯಾತ್ರಾರ್ಥಿಗಳ ಭದ್ರತೆಯು ಯಾರೂ ಉಲ್ಲಂಘಿಸಬಾರದಂತಹ ಕೆಂಪು ಗೆರೆ ಎಂದು ಅವರು ಎಚ್ಚರಿಸಿದ್ದಾರೆ. ಮೆಕ್ಕಾ ಗುರಿಯಾಗಿಸಿಕೊಂಡು ದಾಳಿ ನಡೆಸುವ ಉದ್ದೇಶ ಹೊಂದಿಲ್ಲ. ತಾವು ಪವಿತ್ರ ಸ್ಥಳಗಳ ದಾಳಿ ಮಾಡುವುದಿಲ್ಲ ಎಂದು ಹೂಥಿ ಬಂಡುಕೋರರು ಈ ಹಿಂದೆ ಹೇಳಿದ್ದರು. ಈಗ ಆ ಮಾತು ಹುಸಿಯಾಗಿದೆ ಎಂದು ವರದಿ ತಿಳಿಸಿದೆ.



## ಸೇವೆಯ ಮೂಲಕ ಮೋದಿ ಜನ್ಮದಿನಾಚರಣೆ: ಸಿಮೆಂಟ್ ಮಂಜು

### ಸೆ.17ರಿಂದ ತಿಂಗಳ ಕಾಲ ಸೇವಾ ಸಂಕಲ್ಪ ಅಭಿಯಾನ ರಕ್ತದಾನ, ಜನಜಾಗೃತಿ

• ಪ್ರಜೋದಯ ವರದಿ

**ಸಕಲೇಶಪುರ:** ಮೋದಿ ಅವರ ಜನ್ಮ ದಿನದ ಆಚರಣೆ ಕೇವಲ ಸಂಭ್ರಮಕ್ಕೆ ಸೀಮಿತವಾಗಬಾರದು. ಪ್ರತಿಯೊಬ್ಬ ಕಾರ್ಯಕರ್ತನ ಸೇವೆಯೂ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಬೇಕು. ಅದೇ ನಾವು ಅವರಿಗೆ ಸಲ್ಲಿಸುವ ಅರ್ಥಪೂರ್ಣ ಗೌರವವೆಂದು ಶಾಸಕ ಸಿಮೆಂಟ್ ಮಂಜು, ಅವರು ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಸೇವಾ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಸಾರ್ವಜನಿಕ ಸೇವೆ ಹಾಗೂ ಆಡಳಿತದ ಪಯಣಕ್ಕೆ 25 ವರ್ಷ ಪೂರ್ಣಗೊಂಡಿರುವ ಹಿನ್ನಲೆಯಲ್ಲಿ, ಅವರ ಜನ್ಮ ದಿನವಾದ ಸೆ.17ರಿಂದ ಒಂದು ತಿಂಗಳ ಕಾಲ ಸೇವಾ ಸಂಕಲ್ಪ ಅಭಿಯಾನದಡಿ ವಿವಿಧ ಸೇವಾ ಹಾಗೂ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಸೂಚನೆಯಂತೆ ಮೋದಿ ಅವರ ಜನ್ಮದಿನವನ್ನು ಸೇವಾ ದಿವಸವನ್ನಾಗಿ ಆಚರಿಸಲಾಗುತ್ತಿದೆ. ಯುವ ಜನರನ್ನು ಕೇಂದ್ರವಾಗಿಟ್ಟುಕೊಂಡು ಸೇವಾ ಚಟುವಟಿಕೆಗಳು ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದೆಂದರು.



ನರೇಂದ್ರ ಮೋದಿ ಅವರು ಬಿಜೆಪಿ ಕಾರ್ಯಕರ್ತರಾಗಿ ರಾಜಕೀಯ ಪಯಣ ಆರಂಭಿಸಿ, ಸಂಘಟನೆಯ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ, ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ದೇಶದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಹೆಸರಿನಲ್ಲಿ ಕೇವಲ ಹುಟ್ಟುಹಬ್ಬ ಆಚರಿಸುವುದಕ್ಕಿಂತ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಬಿಜೆಪಿ ಕಾರ್ಯಕರ್ತರಿಂದ ಯಾವುದಾದರೂ ಒಂದು ರೀತಿಯ ನೆರವು ತಲುಪಬೇಕು. ಅದೇ ಸೇವಾ ಸಂಕಲ್ಪ ಅಭಿಯಾನದ ಉದ್ದೇಶವಾಗಬೇಕೆಂದು ಹೇಳಿದರು.

ಜನ್ಮದಿನದ ಆಚರಣೆಯನ್ನು ಆಡಂಬರಕ್ಕೆ ಸೀಮಿತಗೊಳಿಸದೆ ಜನಸೇವೆಯ ಮೂಲಕ ಅರ್ಥಪೂರ್ಣಗೊಳಿಸಬೇಕು. ಪ್ರತಿಯೊಬ್ಬ ಕಾರ್ಯಕರ್ತರೂ ತಮ್ಮ ವ್ಯಾಪ್ತಿಯಲ್ಲಿ ಜನರಿಗೆ ಉಪಯೋಗವಾಗುವ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಅಭಿಯಾನದ ಅಂಗವಾಗಿ ಸೆ.17ರಂದು ಆಶೀರ್ವಾದದ ದೀಪ ಕಾರ್ಯಕ್ರಮ ನಡೆಯಲಿದ್ದು, ಸರ್ಕಾರಿ ಯೋಜನೆಗಳ ಫಲಾನುಭವಿಗಳು ದೀಪ ಬೆಳಗಿಸುವ ಮೂಲಕ ಮೋದಿ ಅವರ ಸಾರ್ವಜನಿಕ ಸೇವೆಯ 25 ವರ್ಷಗಳ ಪಯಣವನ್ನು ಸ್ಮರಿಸಲಿದ್ದಾರೆ. ದೀಪವನ್ನು ವಿಕಸಿತ ಭಾರತದ ಸಂಕೇತವಾಗಿ ಪರಿಗಣಿಸಲಾಗಿದ್ದು, ರಕ್ತದಾನ ಶಿಬಿರ ಸೇರಿ ವಿವಿಧ ಸೇವಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಸೆ.17ರಿಂದ ಅ.7ರವರೆಗೆ ಶಾಲೆಗಳಲ್ಲಿ ಚಿತ್ರಕಲೆ ಹಾಗೂ ಭಾಷಣ ಸ್ಪರ್ಧೆಗಳನ್ನು ಆಯೋಜಿಸಲಾಗುವುದು. ಯುವಜನರಲ್ಲಿ ದೇಶಸೇವೆ, ಸಾಮಾಜಿಕ ಹೊಣೆಗಾರಿಕೆ ಹಾಗೂ ಸಾರ್ವಜನಿಕ ಸೇವೆಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾ ಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವತ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕ್ಯಾಮನಹಳ್ಳಿ ರಾಜಕುಮಾರ್, ಜಿಲ್ಲಾ ಉಪಾಧ್ಯಕ್ಷ ಪ್ರತಾಪ್, ಹಿರಿಯ ಬಿಜೆಪಿ ಮುಖಂಡ ನಾರಾಯಣಗೌಡ ಹಾಗೂ ತಾಲ್ಲೂಕು ಪ್ರಧಾನ ಕಾರ್ಯದರ್ಶಿಗಳು ಇದ್ದರು.

## ಆಲೂರಿನಲ್ಲಿ ವಿಶ್ವೇಶ್ವರಯ್ಯ ಜನ್ಮದಿನಾಚರಣೆ




• ಪ್ರಜೋದಯ ವರದಿ

**ಆಲೂರು:** ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯಿಂದ ಇಂದು ದಕ್ಷಿಣ ಭಾರತ ನೀರಾವರಿಯಿಂದ ಕಂಗೊಳಿಸುತ್ತಿದೆಂದು ವಿಶ್ವೇಶ್ವರಯ್ಯ ಐಟಿಐ ಕಾಲೇಜು ಪ್ರಾಂಶುಪಾಲ ಎಚ್.ವಿ. ನಾಗಭೂಷಣ ಅವರು ತಿಳಿಸಿದರು.

ಪಟ್ಟಣದ ವಿಶ್ವೇಶ್ವರಯ್ಯ ಐಟಿಐ ಕಾಲೇಜಿನಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶ್ವೇಶ್ವರಯ್ಯರವರು ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ ರವರ ತತ್ವಾದರ್ಶಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿ ಕೊಂಡಿದ್ದರು. ವಿಶೇಷ ತಂತ್ರಜ್ಞಾನದಿಂದ ನಿರ್ಮಾಣ ಮಾಡಿದ ಕನ್ನಂಬಾಡಿ ಕಟ್ಟೆ ಸಾವಿರಾರು ವರ್ಷ ಚಿರಾಯುವಾಗಿ ಉಳಿಯುತ್ತದೆ. ಕಾವೇರಿ ನದಿಗೆ ಅಡ್ಡಲಾಗಿ ಕನ್ನಾಂಬಾಡಿ ಕಟ್ಟೆ ನಿರ್ಮಾಣ ಮಾಡಿರುವುದರಿಂದ ಮಂಡ್ಯ ಜಿಲ್ಲೆ ಸದಾ ಹಚ್ಚ ಹಸಿರಾಗಿ ಮೆರೆಯುತ್ತಿದೆ. ಮಂಡ್ಯದ ಕಬ್ಬಿನ ಕಾರ್ಖಾನೆ ಮತ್ತು ಅದರ ಸುತ್ತಮುತ್ತ ಬೆಳೆಯುವ ಆರ್ಥಿಕ ಬೆಳೆಯಾದ ಕಬ್ಬು ಇಂದಿಗೂ ಜೀವಂತವಾಗಿದೆ ಎಂದರೆ ಅದಕ್ಕೆ ಕೃಷ್ಣರಾಜಸಾಗರ ಜಲಾಶಯ ಎಂದರು.

ವಿಶ್ವೇಶ್ವರಯ್ಯ ಪಬ್ಲಿಕ್ ಸ್ಕೂಲ್ ಮುಖ್ಯ ಶಿಕ್ಷಕಿ ಸಿ.ಎಸ್.ಪೂರ್ಣಿಮ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವೇಶ್ವರಯ್ಯ ಅವರು ಮೈಸೂರು ವಿಶ್ವವಿದ್ಯಾನಿಲಯ, ಇಂಜಿನೀಯರಿಂಗ್‌ಕಾಲೇಜು, ಬ್ಯಾಂಕ್ ಆಫ್‌ಮೈಸೂರು, ದಿ.ಮೈಸೂರು ಚೇಂಬರ್ ಆಫ್ ಕಾಮರ್ಸ್, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ತಾಂತ್ರಿಕ ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳು ಸೇರಿ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಇಂದಿನ ಯುವ ಸಮೂಹ ತಮ್ಮ ಜೀವನದ ಬಾಗಿಲು ತೆರೆದುಕೊಳ್ಳಲು ಸ್ಫೂರ್ತಿದಾಯಕರಾಗಿದ್ದಾರೆ ಎಂದರು.

ಸಮಾರಂಭದಲ್ಲಿ ಸಹ ಶಿಕ್ಷಕರಾದ ದೀಪ್ತಿ, ಜಿತೇಂದ್ರ, ರುಕ್ಸಾರ್, ರಾಮಚಂದ್ರ ಇತರರು ಭಾಗವಹಿಸಿದ್ದರು.

## ಅರಸೀಕೆರೆ : ಜ್ಞಾನಶೀಲ ಗಣಪತಿ ಉತ್ಸವ




• ಪ್ರಜೋದಯ ವರದಿ

**ಅರಸೀಕೆರೆ:** ಜ್ಞಾನಶೀಲ ಗಣಪತಿ ಯುವಕ ಸಂಘದ ವತಿಯಿಂದ ನಗರದ ಬಸವಣ್ಣ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ ಜ್ಞಾನಶೀಲಗಣಪತಿಯನ್ನು ಮಂಗಳವಾರ ರಾತ್ರಿ ಉತ್ಸವದ ಮೂಲಕ ನಗರದ ಹೊರವಲಯದಲ್ಲಿರುವ ಕಂತೇನಹಳ್ಳಿ ಕೆರೆಯಲ್ಲಿ ವಿಸರ್ಜಿಸಲಾಯಿತು.

ಪ್ರತಿವರ್ಷದಂತೆ ಈ ವರ್ಷವೂ ಸಹ ಜ್ಞಾನಶೀಲ ಗಣಪತಿಗೆ ಭಕ್ತರು ವಿಶೇಷ ಪೂಜೆ ಸಲ್ಲಿಸಿ ಶ್ರದ್ಧಾ ಭಕ್ತಿಯೊಂದಿಗೆ ಮಾಡಿದ ಪ್ರಸಾದವನ್ನು ನೈವೇದ್ಯ ಮಾಡಿ ನಂತರ ಭಕ್ತರಿಗೆ ವಿತರಿಸುವ ಮೂಲಕ ತಮ್ಮ ಭಕ್ತಿ ಭಾವವನ್ನು ಸಮರ್ಪಿಸಿದರೆ ನನ್ನ ರಾಜಕೀಯ ಪಕ್ಷಗಳ ಮುಖಂಡರು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಜ್ಞಾನಶೀಲ ಗಣಪತಿಯ ದರ್ಶನ ಪಡೆದರು.

ಗಣಪನ ವಿಸರ್ಜನೆಗೂ ಮುನ್ನ ಬಸವಣ್ಣ ದೇವಸ್ಥಾನದಿಂದ ಆರಂಭವಾದ ಉತ್ಸವದಲ್ಲಿ ಜಾನಪದ ಕಲಾ ತಂಡದ ಕಲಾವಿದರು ನಡೆಸಿಕೊಟ್ಟ ಕಾಲ ಪ್ರದರ್ಶನ ಗಮನ ಸೆಳೆದರೆ ಇನ್ನು ಉತ್ಸವ ಸಾಗುವ ಅಲ್ಲಲ್ಲಿ ಸಿಡಿಸಿದ ಮುದ್ದು ಗುಂಡುಗಳ ಪ್ರದರ್ಶನ ಉತ್ಸವದ ರಂಗನ್ನು ಇಮ್ಮಡಿಗೊಳಿಸಿತ್ತು.

ಉತ್ಸವದಲ್ಲಿ ಜಿಲ್ಲಾ ಬಿಜೆಪಿ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಜಿ.ಎನ್.ಮನೋಜ್‌ಕುಮಾರ್, ಜ್ಞಾನಶೀಲ ಗಣಪತಿ ಯುವಕ ಸಂಘದ ಪವನ್, ದೇವರಾಜ್, ಪವನ್, ನಿಶಾಂತ್, ಸೂರಜ್, ವಿಜಿ ಕುಮಾರ್, ಕುಶಾಲ್, ಋತ್ವಿಕ್, ಯಶಸ್, ನಿಶ್ಚಲ್, ಜ್ಞಾನೇಶ್ ಪಾಲ್ಗೊಂಡಿದ್ದರು.

## ಹಣಕಾಸು ಸಂಸ್ಥೆ ಕಿರುಕುಳ : ಆತ್ಮಹತ್ಯೆ

• ಪ್ರಜೋದಯ ವರದಿ

**ಅರಕಲಗೂಡು:** ಸಾಲ ಪಡೆದು ಕಾರು ಖರೀದಿಸಿದ್ದ ಯುವಕನೊಬ್ಬ ಸಾಲದ ಕಂತು ಪಾವತಿಸಲಾಗದೆ ಕಳೆನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ನೈಗೆರೆ ಗ್ರಾಮದಲ್ಲಿ ನಡೆದಿದೆ. ನೈಗೆರೆ ಗ್ರಾಮದ ಗಿರೀಶ (28) ಮೃತ.

ಗಿರೀಶ ಅವರು ಸಾಲ ಪಡೆದು ಸ್ವಿಫ್ಟ್ ಡಿಜೈರ್ ಕಾರು ಖರೀದಿಸಿದ್ದರು. ಕಳೆದ ಒಂದು ವರ್ಷದಿಂದ ಕಾರಿನ ಹಣಕಾಸು ಕಂತುಗಳನ್ನು ಪಾವತಿಸುತ್ತಿದ್ದರು. ಆದರೆ, ಎರಡು ಕಂತುಗಳನ್ನು ಪಾವತಿಸಲು ಸಾಧ್ಯವಾಗಿರಲಿಲ್ಲ. ಈ ಹಿನ್ನಲೆ ಹಣಕಾಸು ಸಂಸ್ಥೆಯವರು ದೂರವಾಣಿ ಮೂಲಕ ಕರೆ ಮಾಡಿ ಹಾಗು ಮನೆ ಬಳಿ ಬಂದು ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಇದರಿಂದ ಮನನೊಂದಿದ್ದ ಗಿರೀಶ ಕಳೆನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೀರನ್ನು ಮಿತವಾಗಿ ಬಳಸಿ: ಸಂಸದ ಶ್ರೇಯಸ್ ಪಟೇಲ್



• ಪ್ರಜೋದಯ ವರದಿ

**ಹೊಳೆನರಸೀಪುರ:** ವಿಧಾನಸಭಾ ಕ್ಷೇತ್ರದ ಹಳೇಕೋಟೆ ಹೋಬಳಿಯ ಬನಕುಪ್ಪೆ ಗ್ರಾಮದಲ್ಲಿ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಿಸಿರುವ ಕುಡಿಯುವ ನೀರಿನ ಘಟಕವನ್ನು ಸಂಸದ ಶ್ರೇಯಸ್ ಪಟೇಲ್ ಅವರು ಉದ್ಘಾಟಿಸಿದರು.

ಬಳಿಕ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ಮಳೆಯ ಕೊರತೆಯ ಹಿನ್ನಲೆ ನೀರನ್ನು ಮಿತವಾಗಿ ಹಾಗು ಜವಾಬ್ದಾರಿಯಿಂದ ಬಳಕೆ ಮಾಡಬೇಕೆಂದು ಮನವಿ ಮಾಡಿದರು.

ನಂತರ ಬನಕುಪ್ಪೆ ಕುಂಬಾರ ಕೊಪ್ಪಲಿ ನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶ್ರೀ ಗಣೇಶ ಮೂರ್ತಿಗೆ ಸಂಸದರು ಪೂಜೆ ಸಲ್ಲಿಸಿ, ಉತ್ತಮ ಮಳೆ ಹಾಗು ಬೆಳೆಗಾಗಿ ಎಲ್ಲರೂ ಗಣೇಶನಲ್ಲಿ ಪ್ರಾರ್ಥಿ ಸೋಣ ಎಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು, ಸ್ಥಳೀಯ ಮುಖಂಡರು ಹಾಗು ಕಾರ್ಯಕರ್ತರು ಉಪಸ್ಥಿತರಿದ್ದರು.

### 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಹೆಚ್.ಕೆ.ಸುರೇಶ್ ಚಾಲನೆ

# ಅಗತ್ಯವಿರುವ ಕಡೆ ಮೂಲಸೌಕರ್ಯ ಕಲ್ಪಿಸಲು ಕ್ರಮ

• ಪ್ರಜೋದಯ ವರದಿ

**ಬೇಲೂರು:** ಸರ್ಕಾರದ ವಿವಿಧ ಯೋಜನೆಗಳ ಮೂಲಕ ದೊರೆ ಯುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಅಗತ್ಯ ವಿರುವ ಕಡೆಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಹೆಚ್.ಕೆ. ಸುರೇಶ್ ಅವರು ತಿಳಿಸಿದರು.

ಎತ್ತಿನಹೊಳೆ ನೀರಾವರಿ ಯೋಜನೆಯಡಿ 50 ಲಕ್ಷ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುವ ತಾಲ್ಲೂಕಿನ ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೆ ಉತ್ತತ್ತನಹಳ್ಳಿ, ಮಾರುತಿ ನಗರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳ ಅಭಿವೃದ್ಧಿಗೆ ಕಳೆದ ಅವಧಿಯಲ್ಲಿ 4 ರಿಂದ 5 ಕೋಟಿ ರೂ. ಅನುದಾನದಲ್ಲಿ ಹಲವು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರು ಸೇರಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಈ ಭಾಗದಲ್ಲಿ ಪ್ರಮುಖ ರಾಜ್ಯ ಹೆದ್ದಾರಿ ಹಾದು ಹೋಗುತ್ತಿದ್ದು, ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಹಾಗೂ ಸಾರ್ವಜನಿಕರು ಸಂಚರಿಸುತ್ತಾರೆ. ಗ್ರಾಮೀಣ ಪ್ರದೇಶಗಳ ಸಂಪರ್ಕ ವ್ಯವಸ್ಥೆ ಸುಧಾರಿಸುವುದರ ಜೊತೆಗೆ ಸುರಕ್ಷಿತ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಗ್ರಾಮೀಣ ಪ್ರದೇಶ ಗಳ ಸಮಗ್ರ ಅಭಿವೃದ್ಧಿಗೆ ಉತ್ತಮ ರಸ್ತೆ ಸಂಪರ್ಕ ಅಗತ್ಯವಾಗಿದೆ. ರಸ್ತೆ ಅಭಿ ವೃದ್ಧಿಯಿಂದ ಗ್ರಾಮಗಳ ನಡುವಿನ ಸಂಪರ್ಕ ಸುಧಾರಿಸುವುದರ ಜೊತೆಗೆ ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಹಾಗೂ ವ್ಯಾಪಾರಸ್ಥರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.



ರಸ್ತೆ ಅಭಿವೃದ್ಧಿಯ ಜೊತೆಗೆ ಚರಂಡಿ, ಕುಡಿಯುವ ನೀರು, ಬಸ್ ನಿಲ್ದಾಣ ಸೇರಿ ಜನರಿಗೆ ಅಗತ್ಯವಿರುವ ಮೂಲ ಸೌಕರ್ಯ ಗಳನ್ನು ಹಂತ ಹಂತವಾಗಿ ಕಲ್ಪಿಸಲಾಗುವುದು. ಗ್ರಾಮಸ್ಥರ ಬೇಡಿಕೆಗಳಿಗೆ ಸ್ಪಂದಿಸಿ ಕ್ಷೇತ್ರದ ಎಲ್ಲಾ ಭಾಗಗಳಿಗೂ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದೆಂದು ಭರವಸೆ ನೀಡಿದರು.

ಗ್ರಾಮದ ಮುಖಂಡ ಪುಟ್ಟರಾಜು ಅವರು ಮಾತನಾಡಿ, ಹೆಚ್.ಕೆ.ಸುರೇಶ್ ಅವರು ಶಾಸಕರಾದ ಬಳಿಕ ಈ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ. ಕಳೆದ ಅವಧಿಯಲ್ಲಿ ರಸ್ತೆ, ಚರಂಡಿ, ಬಸ್ ನಿಲ್ದಾಣ ಸೇರಿ ಹಲವು ಕಾಮಗಾರಿಗಳು ನಡೆದಿದ್ದು, ಅದರಿಂದ ಗ್ರಾಮಸ್ಥರಿಗೆ ಅನುಕೂಲವಾಗಿದೆ. ಬಹುಕಾಲದ ಬೇಡಿಕೆಯಾಗಿದ್ದ ರಸ್ತೆ ಅಭಿವೃದ್ಧಿಗೆ ಇದೀಗ 50 ಲಕ್ಷ ರೂ. ಅನುದಾನ ಬಿಡುಗಡೆ ಯಾಗಿ ಕಾಮಗಾರಿ ಆರಂಭವಾಗುತ್ತಿರುವುದು ಸಂತಸ ತಂದಿದೆ ಎಂದರು.

ಕಾಮಗಾರಿ ಗುಣಮಟ್ಟದಿಂದ ಹಾಗು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು. ಕಾಮಗಾರಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನಗತ್ಯ ತೊಂದರೆಯಾಗದಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕೆಂದು ಮನವಿ ಮಾಡಿದರು.

ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸರಸ್ವತಿ, ಜನಪ್ರತಿನಿಧಿಗಳು, ಸಂಬಂಧಪಟ್ಟ ಇಲಾಖೆ ಅಧಿಕಾರಿ ಗಳು, ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ದಶಲಕ್ಷಣ ಪರ್ವ ಅಂಗವಾಗಿ ಕಲ್ಪಧ್ರುಮ ಮಹಾಭಿಷೇಕ



• ಪ್ರಜೋದಯ ವರದಿ

**ಶ್ರವಣಬೆಳಗೊಳ:** ದಶಲಕ್ಷಣ ಪರ್ವದ ಅಂಗವಾಗಿ ಇಲ್ಲಿನ ಭವ್ಯಚೂಡಾಮಣಿ ಭಂಡಾರಿ ಬಸದಿಯ ಚತುರ್ವಿಂಶತಿ ತೀರ್ಥಂಕರರಿಗೆ ವಿಶೇಷ ಕಲ್ಪಧ್ರುಮ ಮಹಾಭಿಷೇಕ ಧಾರ್ಮಿಕ ವಿಧಿವಿಧಾನಗಳು ಭಕ್ತಿಭಾವದಿಂದ ನೆರವೇರಿತು.

ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ಬುಧವಾರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತರು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡರು. ಬೆಳಿಗ್ಗೆಯಿಂದಲೇ ಬಸದಿಯಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳ ಮೂಲಕ ತೀರ್ಥಂಕರರಿಗೆ ವಿಶೇಷ ಆರಾಧನೆ ಸಲ್ಲಿಸಲಾಯಿತು.

ಕಲ್ಪಧ್ರುಮ ಮಹಾಭಿಷೇಕದ ಅಂಗವಾಗಿ ವಿವಿಧ ದ್ರವ್ಯಗಳನ್ನು ಬಳಸಿಕೊಂಡು 24 ತೀರ್ಥಂಕರರ ಮೂರ್ತಿಗಳಿಗೆ ಕ್ರಮಬದ್ಧವಾಗಿ ಅಬಿಷೇಕ ನೆರವೇರಿಸಲಾಯಿತು. ಬಳಿಕ ವಿಶೇಷ ಪೂಜೆ, ಅರ್ಚನೆ ಹಾಗೂ ಧಾರ್ಮಿಕ ವಿಧಿಗಳನ್ನು ನೆರವೇರಿಸಲಾಯಿತು.

ಮಧ್ಯಾಹ್ನ ಹುಳ್ಳ ಮಂಟಪದಲ್ಲಿ ಅರಿಹಂತ ಪರಮೇಷ್ಠಿಗಳ ಹಾಗೂ ಮಾತೆ ಜಿನವಾಣಿ ಅಷ್ಟವಿಧಾರ್ಚನೆ ಮೂಜೆ, ತತ್ವಾರ್ಥ ಸೂತ್ರ ವಾಚನ ಮತ್ತು ಅರ್ಥ ವಿವರಣೆ ಹಾಗೂ ಪೂಜ್ಯ ತ್ಯಾಗಿಗಳಿಂದ ಪ್ರವಚನ ನೆರವೇರಿತು. ಸಂಜೆ ಧಾರ್ಮಿಕ ಪ್ರಶ್ನೋತ್ತರ ಹಾಗೂ ಸಂಗೀತಮಯ ಆರತಿ ಕಾರ್ಯಕ್ರಮಗಳು ಸಂಪನ್ನಗೊಂಡವು.

ಕಾರ್ಯಕ್ರಮದಲ್ಲಿ ಮುನಿಶ್ರೀ ಸುದೇಯಸಾಗರ ಮಹಾರಾಜರು, ಮುನಿಶ್ರೀ ಪ್ರಭಾಕರಸಾಗರ ಮಹಾರಾಜರು, ಆರ್ಯಿಕಾಶ್ರೀ ಶಿವಮತಿ ಮಾತಾಜಿ, ಆರ್ಯಿಕಾಶ್ರೀ ನಿರ್ಮಲಮತಿ ಮಾತಾಜಿ, ಕ್ಷುಲ್ಲಿಕಾಶ್ರೀ ವಿಶುದ್ಧಮತಿ ಮಾತಾಜಿ, ಕ್ಷುಲ್ಲಿಕಾಶ್ರೀ ಅಮರಜ್ಯೋತಿ ಮಾತಾಜಿ, ಕ್ಷುಲ್ಲಿಕಾಶ್ರೀ ಅಮೃತಜ್ಯೋತಿ ಮಾತಾಜಿ ಹಾಗೂ ಕ್ಷುಲ್ಲಕಶ್ರೀಪರಮಾನಂದಸಾಗರ ಮಹಾರಾಜರು ಪಾವನ ಸಾನಿಧ್ಯ ವಹಿಸಿದ್ದರು.

ಸಾಧು-ಸಂತರು ಹಾಗೂ ಆರ್ಯಿಕಾ ಮಾತಾಜಿಯವರ ಪಾವನ ಸಾನಿಧ್ಯದಲ್ಲಿ ನಡೆದ ಪೂಜಾ ವಿಧಿ ವಿಧಾನಗಳು ಭಕ್ತರ ಗಮನ ಸೆಳೆದವು. ತೀರ್ಥಂಕರರ ಮೂರ್ತಿಗಳಿಗೆ ಅಭಿಷೇಕ ನೆರವೇರಿಸುವ ಸಂದರ್ಭದಲ್ಲಿ ಭಕ್ತರು ಭಕ್ತಿಗೀತೆ, ಮಂತ್ರಪಠಣ ಹಾಗೂ ಜಿನಾರಾಧನೆಯಲ್ಲಿ ತೊಡಗಿಸಿಕೊಂಡಿದ್ದರು. ಬೆಂಗಳೂರಿನ ಅಜಯ್ ಕುಮಾರ್ ಜೈನ್ ಹಾಗೂ ಪುಷ್ಪದೇವಿ ಪವನ್ ಕುಮಾರ್ ಪಾಟ್ನಿ ಸೇರಿ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಮಹಾಭಿಷೇಕದಲ್ಲಿ ಭಾಗವಹಿಸಿದರು.

# ಹಿರಿಯ ನಟ ಅನಂತನಾಗ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ

• ಪ್ರಜೋದಯ ವರದಿ



**ಬೆಂಗಳೂರು:** ಭಾರತೀಯ ಚಿತ್ರರಂಗದ ಅತ್ಯುನ್ನತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಕನ್ನಡದ ಹಿರಿಯ ನಟ ಅನಂತನಾಗ್ ಭಾಜನರಾಗಿದ್ದಾರೆ.

2024ನೇ ಸಾಲಿನ ಈ ಗೌರವಕ್ಕೆ ಅನಂತನಾಗ್ ಅವರನ್ನು ಆಯ್ಕೆ ಮಾಡಲಾಗಿದ್ದು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಈ ಕುರಿತು ಅಧಿಕೃತವಾಗಿ ಘೋಷಿಸಿದೆ. ಐದು ದಶಕಗಳಿಗೂ ಹೆಚ್ಚು ಕಾಲ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಅನಂತನಾಗ್ ಅವರು ಕನ್ನಡ, ಹಿಂದಿ, ಮರಾಠಿ ಸೇರಿ ಹಲವು ಭಾಷೆಗಳ 300ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

ಕಲಾತ್ಮಕ ಮತ್ತು ವಾಣಿಜ್ಯ ಮಾದರಿಯ ಚಿತ್ರಗಳಲ್ಲಿ ತಮ್ಮ ನೈಜ ಅಭಿನಯದ ಮೂಲಕ ಕೋಟ್ಯಾಂತರ ಅಭಿಮಾನಿಗಳ ಮನ ಗೆದ್ದಿರುವ ಅವರಿಗೆ ಪ್ರಶಸ್ತಿ ಒಲಿದಿರುವುದು ಕನ್ನಡ ಚಿತ್ರರಂಗಕ್ಕೆ ದೊರೆತ ಹೆಮ್ಮೆಯಾಗಿದೆ.

**ಸೆ.22ರಂದು ಪ್ರಶಸ್ತಿ ಪ್ರದಾನ**

ಗುಜರಾತ್‌ನ ಏಕತಾ ನಗರದಲ್ಲಿ ನಡೆಯಲಿರುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅನಂತನಾಗ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಡಾ. ರಾಜ್‌ಕುಮಾರ್ ಅವರ ಬಳಿಕ ಈ ಅತ್ಯುನ್ನತ ಗೌರವಕ್ಕೆ ಭಾಜನರಾದ ಮತ್ತೊಬ್ಬ ಕನ್ನಡಿಗ ಎಂಬ ಕೀರ್ತಿಗೂ ಅನಂತ್ ನಾಗ್ ಪಾತ್ರರಾಗಿದ್ದಾರೆ.

## ಇಂದು ಆಲೂರಿನಲ್ಲಿ ವಿಶ್ವಕರ್ಮ ಜಯಂತಿ

**ಆಲೂರು:** ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ಸೆ.17 ರಂದು ಬೆಳಿಗ್ಗೆ 10.30ಕ್ಕೆ ತಾಲ್ಲೂಕು ವಿಶ್ವಕರ್ಮ ಜಯಂತಿಯನ್ನು ತಹಶೀಲ್ದಾರ್ ಹೆಚ್. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಬಿ.ಸಿ.ಶಂಕರಾಚಾರ್ ಅವರು ಮುಖ್ಯ ಭಾಷಣಕಾರರಾಗಿ ಭಾಗವಹಿಸಲಿದ್ದಾರೆ. ತಾಲ್ಲೂಕಿನ ವಿಶ್ವಕರ್ಮ ಸಮುದಾಯದ ಎಲ್ಲಾ ಬಾಂಧವರು ಭಾಗವಹಿಸಬೇಕೆಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಎಂ.ಪಿ.ಹರೀಶ್ ಮತ್ತು ತಾಲ್ಲೂಕು ವಿರಾಟ್ ವಿಶ್ವಕರ್ಮ ಯುವಕ ಸಂಘದ ಅಧ್ಯಕ್ಷ ವೀರಭದ್ರಸ್ವಾಮಿ ಮನವಿ ಮಾಡಿದ್ದಾರೆ.

# ಕ್ರೀಡಾಂಗಣಗಳ ಅಭಿವೃದ್ಧಿಗೆ 100 ಕೋ.ರೂ. ಮೀಸಲಿಡಲು ಒತ್ತಾಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಕ್ರೀಡಾಂಗಣಗಳ ಅಭಿವೃದ್ಧಿ ಹಾಗೂ ಕ್ರೀಡಾಪಟುಗಳಿಗೆ ಅಗತ್ಯ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರವು 100 ಕೋಟಿ ರೂ. ಹಣವನ್ನು ವಿಶೇಷವಾಗಿ ಮೀಸಲಿಡಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಒತ್ತಾಯಿಸಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ತಾಲ್ಲೂಕು ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕ್ಷೇತ್ರ ಸಮನ್ವಯ ಅಧಿಕಾರಿಗಳ ಕಚೇರಿ ಹಾಗೂ ತಾಲ್ಲೂಕು ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ವತಿಯಿಂದ ಪ್ರಸಕ್ತ ಸಾಲಿನ 14 ವರ್ಷ ವಯೋಮಾನದೊಳಗಿನ ವಿದ್ಯಾರ್ಥಿಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅನೇಕ ಕ್ರೀಡಾಂಗಣಗಳಲ್ಲಿ ಕ್ರೀಡಾಪಟುಗಳಿಗೆ ಅಗತ್ಯವಾದ ತರಬೇತಿ ಸೌಲಭ್ಯ, ಉತ್ತಮ ಮೈದಾನ, ಕುಡಿಯುವ ನೀರು, ಶೌಚಾಲಯ, ಬೆಳಕಿನ ವ್ಯವಸ್ಥೆ ಹಾಗೂ ಕ್ರೀಡಾ ಉಪಕರಣಗಳ ಕೊರತೆ ಇದೆ. ಇಂತಹ ಸಂದರ್ಭದಲ್ಲಿ ಇಡೀ ರಾಜ್ಯದ ಕ್ರೀಡಾಂಗಣಗಳ ಅಭಿವೃದ್ಧಿಗೆ 14 ಕೋಟಿ ರೂ. ಅನುದಾನ ಮೀಸಲಿಡುವುದು ಅತ್ಯಂತ ಕಡಿಮೆ ಮೊತ್ತವಾಗಿದೆ. ಕ್ರೀಡಾಂಗಣಗಳು ಸೂಕ್ತ ನಿರ್ವಹಣೆ ಹಾಗೂ ಮೂಲಸೌಕರ್ಯದ ಕೊರತೆ ಯಿಂದ ಬಳಲುತ್ತಿವೆ ಎಂದರು.

ಗ್ರಾಮೀಣ ಪ್ರದೇಶಗಳ ಕ್ರೀಡಾಪಟುಗಳಿಗೆ ಸಮರ್ಪಕ ತರಬೇತಿ ಹಾಗೂ ಅಭ್ಯಾಸದ ಅವಕಾಶ ಕಲ್ಪಿಸಲು ಸುಸಜ್ಜಿತ ಕ್ರೀಡಾಂಗಣಗಳ ಅಗತ್ಯ ಇದೆ. ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವುದರಿಂದ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡುವ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಉತ್ತಮ ಸಾಧನೆ ಮಾಡಲು ಅವಕಾಶ ಕಲ್ಪಿಸಬಹುದು. ಆದ್ದರಿಂದ ಸರ್ಕಾರವು ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ ಬಜೆಟ್‌ನಲ್ಲಿ 100 ಕೋಟಿ ರೂ. ಅನುದಾನ ಮೀಸಲಿಡಬೇಕೆಂದು ಮನವಿ ಮಾಡಿದರು.

ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ ಮುಂದಾದರೆ ರಾಜ್ಯದ ಯುವಜನರಲ್ಲಿ ಕ್ರೀಡೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಲಿದ್ದು, ಉತ್ತಮ ಕ್ರೀಡಾಪಟುಗಳನ್ನು ರೂಪಿಸಲು ಸಹಕಾರಿಯಾಗಲಿದೆ. ಕ್ರೀಡಾಂಗಣಗಳ ಅಭಿವೃದ್ಧಿಗೆ ಮೀಸಲಿಡುವ ಅನುದಾನವನ್ನು ಹೊಸ ಕ್ರೀಡಾ ಮೈದಾನಗಳ ನಿರ್ಮಾಣ, ಹಳೆಯ ಕ್ರೀಡಾಂಗಣಗಳ ನವೀಕರಣ, ಆಟದ ಸಲಕರಣೆಗಳ ಖರೀದಿ, ಒಳಾಂಗಣ ಕ್ರೀಡಾ ಸೌಲಭ್ಯಗಳ ನಿರ್ಮಾಣ ಸೇರಿ ವಿವಿಧ ಕಾಮಗಾರಿಗಳಿಗೆ ಬಳಸಬಹುದೆಂದು ತಿಳಿಸಿದರು.

ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ ಕ್ರೀಡಾಪಟುಗಳಿಗೆ ಗುಣಮಟ್ಟದ ತರಬೇತಿ ಹಾಗೂ ಉತ್ತಮ ಮೂಲಸೌಕರ್ಯ ಒದಗಿಸಿದಾಗ ಮಾತ್ರ ರಾಜ್ಯದಿಂದ ರಾಷ್ಟ್ರಮಟ್ಟ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ಪ್ರತಿಭೆಗಳನ್ನು ಬೆಳೆಸಲು ಸಾಧ್ಯ. ಆದ್ದರಿಂದ ಸರ್ಕಾರವು ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಕ್ರೀಡಾಂಗಣಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ 100 ಕೋಟಿ ರೂ. ಅನುದಾನ ಮೀಸಲಿಡಬೇಕೆಂದರು.

ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ಕ್ರೀಡೆಗಳು ಮಹತ್ವದ ಪಾತ್ರ ವಹಿಸುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ಪಾಠದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಕೂಡ ಶಿಕ್ಷಣದಷ್ಟೇ ಆದ್ಯತೆ ಕ್ರೀಡೆಗಳಿಗೂ ಇರಬೇಕು. ಯುವ ಪ್ರತಿಭೆಗಳು ಶಾಲಾ-ಕಾಲೇಜುಗಳಲ್ಲಿ ಆಯೋಜಿಸುವ ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಈ ಕ್ರೀಡೆಯಲ್ಲಿ ರಾಜ್ಯಮಟ್ಟವನ್ನು ಪ್ರತಿನಿಧಿಸುವವರಿಗೆ ವಿಶೇಷ ನೆರವು ನೀಡಲಾಗುವುದು. ಮಕ್ಕಳ ಆಸಕ್ತಿಯನ್ನು ಗಮನಿಸಿ ಶಿಕ್ಷಕರು ಅವರನ್ನು ಪ್ರೋತ್ಸಾಹಿಸಬೇಕು. ಕ್ರೀಡೆಯಲ್ಲಿ ಎಲ್ಲರೂ ಗೆಲ್ಲಲು ಸಾಧ್ಯವಿಲ್ಲ. ಸೋಲು ಯಾವುದೇ ಕಾರಣಕ್ಕೂ ನಿರಾಶೆ ಉಂಟು ಮಾಡದೇ ಪುನಃ ಗೆಲ್ಲುವ ಛಲ ಹುಟ್ಟಿಸಬೇಕೆಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್.ದೀಪಾ ಅವರು ಮಾತನಾಡಿ, ಕ್ರೀಡಾಕೂಟದ ಬಹುಮಾನ, ಮಕ್ಕಳಿಗೆ ಮಧ್ಯಾಹ್ನದೂಟದ ಪ್ರಾಯೋಜಕತ್ವವನ್ನು ಶಾಸಕ ಸಿ.ಎನ್.ಬಾಲಕೃಷ್ಣ ಅವರೇ ಮಾಡಿದ್ದು ಅದರಿಂದ ಇಲಾಖೆ ಯಶಸ್ವಿಯಾಗಿ ಕ್ರೀಡಾಕೂಟ ಆಯೋಜಿಸಲು ಸಹಕಾರಿಯಾಗಿದೆ ಎಂದರು.

ಕ್ರೀಡಾಕೂಟದಲ್ಲಿ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಎನ್.ಅನಿಲ್, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಆನಂದ್, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಎನ್.ಗೋಪಾಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಜಿ.ದ್ಯಾವೇಗೌಡ, ಪ್ರಧಾನ ಕಾರ್ಯದರ್ಶಿ ಸಿ.ಆರ್.ಮಂಜುನಾಥ್, ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಪ್ರಮೋದ್, ಕ್ರೀಡಾಕೂಟದ ಸಂಘಟನಾ ಅಧ್ಯಕ್ಷ ಬಿ.ಎನ್.ಶ್ರೀನಿವಾಸಮೂರ್ತಿ, ಸಂಘಟನಾ ಕಾರ್ಯದರ್ಶಿ ಡಿ.ಆರ್.ಪುಷ್ಪ, ಖಜಾಂಚಿ ಪದ್ಮಿನಿ, ಶಿಕ್ಷಣ ಸಂಯೋಜಕ ಜೆ.ಇ.ಲೋಕೇಶ್, ಸಮೂಹ ಸಂಪನ್ಮೂಲ ವ್ಯಕ್ತಿಗಳು ಶಿಕ್ಷಕರ ಸಂಘದ ಪದಾಧಿಕಾರಿಗಳು, ದೈಹಿಕ ಶಿಕ್ಷಕರು ಸೇರಿ 500ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು.

## ರಾಮಯ್ಯ ನಿಧನ

• ಪ್ರಜೋದಯ ವರದಿ



**ಹಾರನಹಳ್ಳಿ:** ಶ್ರೀ ರಾಮ ಸೇವಾ ಸಮಿತಿ ಹಾಗು ಬ್ರಾಹ್ಮಣ ಸಮಾಜದ ಗೌರವಾಧ್ಯಕ್ಷರಾಗಿದ್ದ ಜಮೀನ್ದಾರ್ ಹೆಚ್.ಎನ್. ರಾಮಯ್ಯ (99) ಅವರು ಬುಧವಾರ ಬೆಳಿಗ್ಗೆ ಹಾರನ ಹಳ್ಳಿ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ.

ಮೃತರು ಮಗ ಶ್ರೀನಿವಾಸ್ ನಾಗಭೂಷಣ್, ಮಂಗಳೂರು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಜಂಟಿ ನಿರ್ದೇಶಕ ಶಂಕರ್ ನಾಡಿಗ್ ಸೇರಿ ಮೂರ್ವರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಹಾರನಹಳ್ಳಿ ನೆರವೇರಿತ್ತು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಸ್ಥಳೀಯ ಮುಖಂಡರು, ತಾಲ್ಲೂಕು ಬ್ರಾಹ್ಮಣ ಸಮಾಜದ ಪದಾಧಿಕಾರಿಗಳು, ಹಾರನಹಳ್ಳಿ ಬ್ರಾಹ್ಮಣ ಸಮಾಜ ಕೋಟೆ ಗಣಪತಿ ಯುವಕ ಸಂಘ ಹಾಗು ಇತರೆ ಸಂಘ-ಸಂಸ್ಥೆಯವರು ಶ್ರದ್ಧಾಂಜಲಿ ಸಲ್ಲಿಸಿದರು.

## ಮಲೆನಾಡಿನಲ್ಲಿ ಹೆಚ್ಚಿದ ವನ್ಯಜೀವಿಗಳ ಓಡಾಟ



• ಪ್ರಜೋದಯ ವರದಿ

**ಸಕಲೇಶಪುರ:** ತಡರಾತ್ರಿ ಮೂರು ಕಾಡುಕೋಣಗಳು ರಸ್ತೆ ದಾಟುತ್ತಿರುವ ದೃಶ್ಯ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಮಂಗಳವಾರ ತಡರಾತ್ರಿ ಸುದ್ದಿ ಸಂಗ್ರಹಣೆಗೆ ತೆರಳಿ ವಾಪಸ್ ಸಕಲೇಶಪುರಕ್ಕೆ ಬರುತ್ತಿದ್ದ ವೇಳೆ ಹೆತ್ತೂರು-ಸಕಲೇಶಪುರ ಮಾರ್ಗ ಮಧ್ಯದಲ್ಲಿ ಮೂರು ಕಾಡುಕೋಣಗಳು ಏಕಾಏಕಿ ರಸ್ತೆ ದಾಟುತ್ತಿರುವುದು ಕಂಡು ಬಂದಿದೆ. ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿಯಲಾಗಿದ್ದು, ಸಾಮಾಜಿಕಜಾಲತಾಣಗಳಲ್ಲಿಹರಿದಾಡುತ್ತಿದೆ.

ಮಲೆನಾಡು ಭಾಗದಲ್ಲಿ ಕಾಡಾನೆಗಳೊಂದಿಗೆ ಕಾಡುಕೋಣಗಳ ಓಡಾಟವೂ ಹೆಚ್ಚಾಗಿದ್ದು, ರಾತ್ರಿ ವೇಳೆಯಲ್ಲಿ ರಸ್ತೆಗಳಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಸ್ಥಳೀಯರು ಮನವಿ ಮಾಡಿದ್ದಾರೆ. ವನ್ಯಜೀವಿಗಳು ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳನ್ನು ನಿಧಾನಗೊಳಿಸಿ, ಅವುಗಳಿಗೆ ಯಾವುದೇ ರೀತಿಯ ತೊಂದರೆ ಉಂಟುಮಾಡದಂತೆ ಎಚ್ಚರಿಕೆ ವಹಿಸುವ ಅಗತ್ಯವಿದೆ.

# ಹಣಕ್ಕಿಂತ ಆರೋಗ್ಯ ಸಂಪಾದನೆ ಮುಖ್ಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಹಣ ಹಾಗೂ ಆಸ್ತಿ ಸಂಪಾದನೆಯ ಬರದಲ್ಲಿ ಮನುಷ್ಯನು ತನ್ನ ಆರೋಗ್ಯವನ್ನು ಮರೆಯುತ್ತಿದ್ದಾನೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಉಳ್ಳಾವಳ್ಳಿ ಗ್ರಾಮದಲ್ಲಿ ಆಯುಷ್ಮಾನ್ ಸ್ವಾಸ್ಥ್ಯ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ಕಾಮಗಾರಿ ಸೇರಿ ಒಟ್ಟು 65 ಲಕ್ಷ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹಣಕ್ಕಿಂತ ಆರೋಗ್ಯ ಸಂಪಾದನೆ ಮುಖ್ಯ ಎಂಬುದನ್ನು ಮನಗಾಣಬೇಕಿದೆ. ಪೂರ್ವ ಕಾಲದಲ್ಲಿ ಪ್ಲೇಗ್, ಮಲೇರಿಯಾ, ಕಾಲರ, ಸಿಡುಬು ಹಾಗೂ ಆಮಶಂಕೆ ಸೇರಿ ಬೆರಳೆಣಿಕೆಷ್ಟು ಕಾಯಿಲೆಗಳು ಮಾತ್ರ ಕಾಣಿಸಿಕೊಳ್ಳುತ್ತಿದ್ದವು. ಆದರೆ ಆಧುನಿಕ ಜಗತ್ತು ಬೆಳೆದಂತೆಲ್ಲ ಆಹಾರ ಪದ್ಧತಿ ಹಾಗೂ ಜೀವನ ಶೈಲಿಯ ಬದಲಾವಣೆ ಪರಿಣಾಮ ಸಾವಿರಾರು ಕಾಯಿಲೆಗಳು ಸೃಷ್ಟಿಯಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಕೃಷಿ ಚಟುವಟಿಕೆಯಲ್ಲಿ ಆಧುನಿಕ ತಂತ್ರಜ್ಞಾನಗಳು ಕಾಲಿಟ್ಟ ಬಳಿಕ ಮೂಲ ಕೃಷಿ ಪದ್ಧತಿ ಯೊಂದಿಗೆ ಹಗಲಿರುಳು ದುಡಿಯುವ ಕಾಲ ಕಣ್ಮರೆಯಾಗುತ್ತಿದೆ. ಕುಳಿತಲ್ಲಿಯೇ ಎಲ್ಲಾ ಕೆಲಸ ಗಳು ಸುಲಭ ಸಾಧ್ಯ ಎನಿಸುತ್ತಿದ್ದಂತೆಯೇ ದೇಹಕ್ಕೆ ಇನ್ನಿಲ್ಲದ ದುಷ್ಪರಿಣಾಮಗಳು ತಲೆದೋರು ತ್ತಿದ್ದು ನೆಮ್ಮದಿಯ ಬದುಕು ಕಣ್ಮರೆಗೆ ಸರಿಯುತ್ತಿವೆಂದು ಕಳವಳ ವ್ಯಕ್ತಪಡಿಸಿದರು.

ಪ್ರತಿದಿನ ಬೆಳಿಗ್ಗೆ ಕಾಲ್ನಡಿಗೆ ಹಾಗೂ ಯೋಗ-ಧ್ಯಾನ ಮಾಡುವ ಮೂಲಕ ತಮ್ಮ ಆರೋಗ್ಯ ವನ್ನು ಕಾಪಾಡಿಕೊಳ್ಳಬೇಕು. ಜಮೀನಿನಲ್ಲಿ ಸಾಧ್ಯವಾದಷ್ಟು ಕೃಷಿ ಚಟುವಟಿಕೆಯಲ್ಲಿ ತೊಡಗಿ ಕೊಳ್ಳಬೇಕು. ಪೌಷ್ಟಿಕಾಂಶ ಹೊಂದಿರುವ ತಾಜಾ ತರಕಾರಿಗಳಿಂದ ಸಿದ್ಧಪಡಿಸಿದ ಆಹಾರಗಳ ಸೇವನೆಯೊಂದಿಗೆ ಶುದ್ಧ ಕುಡಿಯುವ ನೀರಿನ ಬಳಕೆ ಅಗತ್ಯ ಎಂದು ಸಲಹೆ ನೀಡಿದರು.

ಗ್ರಾಮದಲ್ಲಿ ನಿರ್ಮಾಣ ಹಂತದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇಗುಲಕ್ಕೆ 2 ಲಕ್ಷ ರೂ. ಹಾಗೂ ಈಗಾಗಲೇ ನಿರ್ಮಾಣಗೊಂಡಿರುವ ಶ್ರೀ ಗಣಪತಿ ಮಂದಿರಕ್ಕೆ 3 ಲಕ್ಷ ರೂ. ದೇಣಿಗೆ ನೀಡಲಾಗುವುದು. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೂತನ ಕಟ್ಟಡ ಮಂಜೂರಾಗಿದ್ದು ನಿರ್ಮಾಣ ಕಾಮಗಾರಿಗೆ ಶೀಘ್ರದಲ್ಲಿಯೇ ಚಾಲನೆ ನೀಡಲಾಗುವುದೆಂದು ಭರವಸೆ ನೀಡಿದರು.

ಇದಕ್ಕೂ ಮೊದಲು ಗಣಪತಿ ಮಂದಿರದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ವಿನಾಯಕ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಪುಟ್ಟರಾಜು, ಎಂ.ಆರ್. ವಾಸು, ಎಪಿಎಂಸಿ ಮಾಜಿ ಅಧ್ಯಕ್ಷ ರಘು ರಾಮ್, ದಿಡಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಕೆ.ಯೋಗೇಶ್, ಉಪಾಧ್ಯಕ್ಷ ಹೆಚ್.ಎಸ್.ಮಹೇಶ್ ಹಾಗೂ ಇತರರು ಇದ್ದರು.

# ಪ್ರವಾಸಕ್ಕೆ ಬಂದಿದ್ದ ಯುವತಿ ಲಾಡ್ಜ್‌ನಲ್ಲಿ ಸಾವು

» ಮೊದಲನೇ ಪುಟದಿಂದ

ಸೆಂಟ್ ಜಾನ್ ಕಾಲೇಜಿನಲ್ಲಿ ಸಿಎ ವ್ಯಾಸಂಗ ಮಾಡಿದ್ದರು. ಮೂರು ತಿಂಗಳ ಹಿಂದೆ ವಿದ್ಯಾಭ್ಯಾಸ ಪೂರ್ಣಗೊಳಿಸಿ ಬೆಂಗಳೂರಿನ ನಾಗಸಂದ್ರದಲ್ಲಿ ಪೋಷಕರೊಂದಿಗೆ ವಾಸವಾಗಿದ್ದಳು.

ಶುಕ್ರವಾರ ಸ್ನೇಹಿತೆಯರಾದ ರಮ್ಯಾ, ಪೂಜಾ ಹಾಗು ಬಾಲ್ಯ ಸ್ನೇಹಿತರಾದ ರಘು ಮತ್ತು ದರ್ಶನ್ ಅವರೊಂದಿಗೆ ಸಕಲೇಶಪುರಕ್ಕೆ ಪ್ರವಾಸಕ್ಕೆ ತೆರಳುವುದಾಗಿ ಪೋಷಕರಿಗೆ ತಿಳಿಸಿ ವರ್ಷಾ ಮನೆಯಿಂದ ಹೊರಟಿದ್ದರು. ಅದೇ ದಿನ ರಾತ್ರಿ ಸುಮಾರು 10 ಗಂಟೆಗೆ ವಳಲಹಳ್ಳಿ ಕೂಡಿಗೆಯಲ್ಲಿರುವ ಶ್ರೀದೇವಿ ಲಾಡ್ಜ್‌ನಲ್ಲಿ ವರ್ಷಾ, ರಘು ಹಾಗು ದರ್ಶನ್ ಒಂದೇ ಕೊಠಡಿಯಲ್ಲಿ ತಂಗಿದ್ದರು ಎನ್ನಲಾಗಿದೆ.

ಶನಿವಾರ ಹಾಗು ಭಾನುವಾರ ಬೆಟ್ಟದ ಭೈರವೇಶ್ವರ, ಮಲ್ಲಹಳ್ಳಿ ಫಾಲ್ಸ್ ಸೇರಿ ವಿವಿಧ ಪ್ರವಾಸಿ ತಾಣಗಳಿಗೆ ಮೂವರು ತೆರಳಿದ್ದರು. ಸೋಮವಾರ ಬೆಳಿಗ್ಗೆ ಮನೆಗೆ ವಾಪಾಸ್ ಬರುತ್ತಿರುವುದಾಗಿ ವರ್ಷಾ ತಾಯಿ ಕಲಾವತಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದಳು. ಆದರೆ, ಸೋಮವಾರ ವರ್ಷಾ ಮನೆಗೆ ವಾಪಾಸ್ ಬಾರದ ಹಿನ್ನಲೆ ಆತಂಕಗೊಂಡ ತಾಯಿ ಹಲವು ಬಾರಿ ಮೊಬೈಲ್‌ಗೆ ಕರೆ ಮಾಡಿದ್ದಾರೆ. ವರ್ಷಾ ಕರೆ ಸ್ವೀಕರಿಸದಿದ್ದರಿಂದ ಆಕೆಯೊಂದಿಗೆ ತೆರಳಿದ್ದ ರಘು ಹಾಗು ದರ್ಶನ್ ಅವರಿಗೂ ಕರೆ ಮಾಡಿದ್ದಾರೆ. ಅವರಿಂದಲೂ ಪ್ರತಿಕ್ರಿಯೆ ಬಾರದ ಹಿನ್ನಲೆ ಕುಟುಂಬದವರು ಆತಂಕಗೊಂಡಿದ್ದಾರೆ.

ಈ ನಡುವೆ ವರ್ಷಾ ಸ್ನಾನ ಮಾಡುವ ವೇಳೆ ಕುಸಿದು ಬಿದ್ದು ಮೃತಪಟ್ಟಿದ್ದು, ಆಕೆಯನ್ನು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ರಘು ಹಾಗು ದರ್ಶನ್ ವರ್ಷಾ ಕುಟುಂಬದವರಿಗೆ ತಿಳಿಸಿದ್ದಾರೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಿ ಇಬ್ಬರೂ ಲಾಡ್ಜ್‌ಗೆ ವಾಪಾಸ್ ತೆರಳಿದ್ದರು.

ರಾತ್ರಿ ವೇಳೆಯಾದರೂ ಇಬ್ಬರೂ ಆಸ್ಪತ್ರೆಗೆ ಬಾರದ ಹಿನ್ನಲೆ ಆಸ್ಪತ್ರೆಯ ವೈದ್ಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಆಧರಿಸಿ ಪೊಲೀಸರು ಲಾಡ್ಜ್‌ಗೆ ತೆರಳಿ ರಘು ಹಾಗು ದರ್ಶನ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳಿಕ ವರ್ಷಾ ಪೋಷಕರಿಗೆ ವಿಷಯ ತಿಳಿಸಲಾಗಿದೆ.

ಮಗಳನ್ನು ಕಳೆದುಕೊಂಡಿರುವ ತಾಯಿ ಕಲಾವತಿ ಅವರು ವರ್ಷಾ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಪ್ರವಾಸಕ್ಕೆ ರಮ್ಯಾ ಹಾಗು ಪೂಜಾ ಕೂಡ ಬರುತ್ತಾರೆಂದು ಮಗಳು ತಿಳಿಸಿದ್ದಳು. ಆದರೆ, ಸಕಲೇಶಪುರಕ್ಕೆ ಬಂದ ಬಳಿಕ ಅವರಿಬ್ಬರೂ ಇಲ್ಲದಿರುವುದು, ವರ್ಷಾ ರಘು ಹಾಗು ದರ್ಶನ್ ಜೊತೆ ಮಾತ್ರ ಲಾಡ್ಜ್‌ನಲ್ಲಿ ತಂಗಿರುವುದು ಸೇರಿ ಹಲವು ವಿಚಾರಗಳು ಅನುಮಾನ ಮೂಡಿಸಿವೆ ಎಂದು ಹೇಳಿದ್ದಾರೆ.

ಯುವತಿಯ ಸಾವಿನ ನಿಖರ ಕಾರಣ ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕವಷ್ಟೇ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ವರ್ಷಾ ಜೊತೆಗಿದ್ದ ಇಬ್ಬರನ್ನು ವಿಚಾರಣೆ ನಡೆಸುತ್ತಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿ ಹಾಗೂ ತನಿಖೆಯ ಅಂಶಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಪೊಲೀಸರು ತಿಳಿಸಿದ್ದಾರೆ.

## ಕ್ಯಾತನಹಳ್ಳಿ ಏತ ನೀರಾವರಿಯಿಂದ ಕೆರೆಗೆ ನೀರು ಹರಿಸಿ

» ಮೊದಲನೇ ಪುಟದಿಂದ

ಯೋಜನೆಯ ಕಾಮಗಾರಿಯನ್ನು ತ್ವರಿತಗೊಳಿಸಿ, ದುರಸ್ತಿಗೆ ಒಳಗಾಗಿರುವ ಎರಡು ಮೋಟಾರ್‌ಗಳನ್ನು ಸರಿಪಡಿಸಿ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಬೇಕು. ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡರೆ 58 ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಲಿದೆ. ಯೋಜನೆಯ ಕಾಮಗಾರಿ ಆರಂಭವಾಗಿ ಹಲವು ವರ್ಷಗಳು ಕಳೆದಿದ್ದರೂ ಇನ್ನೂ ನೀರು ಹರಿಸಿಲ್ಲ. ಯೋಜನೆಯ ವ್ಯಾಪ್ತಿಯ ಕೆರೆಕಟ್ಟೆಗಳು ನೀರಿಲ್ಲದೆ ಬತ್ತಿದ್ದು, ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆಂದು ದೂರಿದರು.

ನೀರು ಹರಿಸುವ ಕುರಿತು ಅಧಿಕಾರಿಗಳು ಸ್ಪಷ್ಟ ಭರವಸೆ ನೀಡುವವರೆಗೆ ಸ್ಥಳದಿಂದ ತೆರಳುವುದಿಲ್ಲವೆಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ತಿಂಗಳಾಂತ್ಯದೊಳಗೆ ನೀರು ಹರಿಸದಿದ್ದರೆ ಬೇಲೂರು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

**ಫಲ ಸಿಗುವವರೆಗೆ ಹೋರಾಟ**

ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಅವರು, ರೈತ ದೇಶದ ಬೆನ್ನೆಲುಬು ಎನ್ನುತ್ತಾರೆ. ಆದರೆ, ರೈತನ ಬೆನ್ನೆಲುಬೇ ಗಟ್ಟಿಯಾಗಿಲ್ಲ. ಸರ್ಕಾರ ಮತ್ತು ಸಚಿವರ ಭರವಸೆ ನಂಬಿ ಸುಮ್ಮನಾದರೆ ಬೇಡಿಕೆ ಈಡೇರದು. ಇದು ಮನೆಯ ಹೋರಾಟವಲ್ಲ. ಕೆರೆ ಬತ್ತಿದರೆ ರೈತರ ಬದುಕು ಬತ್ತಿದಂತೆ. ಬೇಡಿಕೆ ಈಡೇರುವವರೆಗೆ ರೈತರ ಹೋರಾಟ ನಿಲ್ಲಬಾರದು. ಬರದಿಂದ ನೀರಿಗಾಗಿ ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧ ಎಂದು ವಿಷಾದಿಸಿದರು.

ನೀರಾವರಿ ಎಂಬುದು ಕೇವಲ ರೈತರ ವಿಚಾರವಲ್ಲ. ಕೆರೆಗಳಲ್ಲಿ ನೀರು ತುಂಬಿಸುವುದರಿಂದ ಪ್ರಾಣಿಪಕ್ಷಿಗಳ ಜೀವಕ್ಕೂಅನುಕೂಲವಾಗಲಿದೆ. ಕೆರೆಗೆ ಬಾಗಿನ ಅರ್ಪಿಸುವ ದಿನ ಬಂದಾಗಲೇ ಹೋರಾಟ ಯಶಸ್ವಿಯಾಗಿದೆ ಎಂದು ಪರಿಗಣಿಸಬೇಕು. ಕಣ್ಣೊರೆಸುವ ತಂತ್ರ ಬಿಟ್ಟು ಶಾಸಕರು ಹಾಗು ಅಧಿಕಾರಿಗಳು ಸಮಸ್ಯೆಗೆ ಸ್ಪಂದಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರಾದ ಬಿಟ್ಟಗೌಡನಹಳ್ಳಿ ಮಂಜು, ಮಾರನಹಳ್ಳಿ ಶೇಷಣ್ಣ, ನಾಗರಾಜು, ಪಾಲಾಕ್ಷ ಹಾಗೂ ಬಿಜೆಪಿ ಮುಖಂಡರಾದ ಲಲಾಟ್ ಮೂರ್ತಿ, ಪುರುಷೋತ್ತಮ್ ಭಾಗವಹಿಸಿದ್ದರು.

## ಕಾಲುವೆಗೆ ನೀರು ಹರಿಸಿದರೂ ಕೆರೆಗಳಿಗೆ ತಲುಪಿಲ್ಲ

» ಮೊದಲನೇ ಪುಟದಿಂದ

ಅಗತ್ಯ ಕ್ರಮ ಕೈಗೊಳ್ಳಬೇಕು. ಕಾಮಸಮುದ್ರ ಏತ ನೀರಾವರಿ ಯೋಜನೆಗೆ ತಮ್ಮ ಅವಧಿಯಲ್ಲಿ ಸುಮಾರು350 ಕೋ.ರೂ.ಮಂಜೂರು ಮಾಡಿಸಲಾಗಿತ್ತು. ಭೂಸ್ವಾಧೀನ ಹಾಗೂ ಕಾಮಗಾರಿ ಅನುಷ್ಠಾನಕ್ಕೂ ಹಣಕಾಸಿನ ವ್ಯವಸ್ಥೆ ಮಾಡಲಾಗಿತ್ತು. ಕಾಚೇನಹಳ್ಳಿ ಕಟ್ಟೆಗೆ ನೇರವಾಗಿ ನೀರು ಹರಿಸಲು ಇತ್ತೀಚೆಗೆ 4 ಕೋ.ರೂ. ಒದಗಿಸಲಾಗಿದ್ದು, ಇನ್ನಷ್ಟು ಅನುದಾನದಅಗತ್ಯವಿದೆ ಎಂದು ಹೇಳಿದರು.

**ರೈತರ ಪ್ರತಿಭಟನೆಗೆ ಅವಕಾಶ ನೀಡಬೇಡಿ**

ಶಾಂತಿಗ್ರಾಮ-ದುದ್ದ ವ್ಯಾಪ್ತಿಯ 160 ಗ್ರಾಮಗಳು ಹಾಗು 168 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬವಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಜನರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ತೆರಳಿ ವಾಸ್ತವ ಪರಿಸ್ಥಿತಿ ಪರಿಶೀಲಿಸಬೇಕೆಂದು ಆಗ್ರಹಿಸಿದರು.

## ಗ್ರಾಮೀಣ ಭಾಗದ ವಿದ್ಯುತ್ ಮಾರ್ಗ ಬಲಗೊಳಿಸಿ

» ಮೊದಲನೇ ಪುಟದಿಂದ

ನಡೆಸಿದರು. ಸಾರ್ವಜನಿಕರಿಗೆ ವಿದ್ಯುತ್ ಪೂರೈಕೆಯಲ್ಲಿ ತೊಂದರೆಯಾಗದಂತೆ ಮಾಡಿರುವ ಪರ್ಯಾಯ ವ್ಯವಸ್ಥೆಯ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, ಹೊಸ ಪರಿವರ್ತಕವನ್ನು ಶೀಘ್ರವಾಗಿ ತರಿಸಿಅಳವಡಿಸುವಕಾಮಗಾರಿ ಯನ್ನು ಚುರುಕುಗೊಳಿಸುವಂತೆ ತಿಳಿಸಿದರು.

ಸಭೆಯಲ್ಲಿ ಸೆಸ್ಕಾಂ ಮುಖ್ಯ ಇಂಜಿನೀಯರ್ ಆದಿಶೇಷ, ಕೆಪಿಟಿಸಿಎಲ್ ಅಧೀಕ್ಷಕ ಇಂಜಿನೀಯರ್ ಮಹೇಶ್, ಕಾರ್ಯನಿರ್ವಾಹಕ ಇಂಜಿನೀಯರ್‌ಗಳಾದ ಪ್ರಸನ್ನ, ಅರ್ಜುನ್, ನಗರಸಭೆಯ ಜಲಮಂಡಳಿ ಕಿರಿಯ ಇಂಜಿನೀಯರ್ ಸುಜಾತಾ ಸೇರಿ ಎರಡೂ ಇಲಾಖೆಗಳ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ಗಳು ಹಾಗೂ ಸೆಕ್ಷನ್ ಅಧಿಕಾರಿಗಳು ಉಪಸ್ಥಿತರಿದ್ದರು.

## ವಡ್ಡರಹಳ್ಳಿಗೆ ಎತ್ತಿನಹೊಳೆ ನೀರು ಹರಿಸಲು ಆಗ್ರಹ

» ಮೊದಲನೇ ಪುಟದಿಂದ

ಹಾಗೂ ಹಡೇನಹಳ್ಳಿ ಗ್ರಾಮಗಳು ಎತ್ತಿನಹೊಳೆ ಯೋಜನೆಯಿಂದ ನೀರಿನ ಸೌಲಭ್ಯದಿಂದ ವಂಚಿತವಾಗಿವೆ. ಈಗಾಗಲೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಈ ಕುರಿತು ಎತ್ತಿನಹೊಳೆ ಯೋಜನೆಯ ಅಧಿಕಾರಿಗಳು, ಶಾಸಕ ಎಚ್.ಕೆ.ಸುರೇಶ್ ಹಾಗೂ ಮಾಜಿ ಸಚಿವ ಬಿ.ಶಿವರಾಮ್ ಅವರಿಗೆ ಮನವಿ ಸಲ್ಲಿಸಿದ್ದರೂ ಸಮಸ್ಯೆ ಬಗೆಹರಿದಿಲ್ಲ. ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಎತ್ತಿನಹೊಳೆ ನೀರನ್ನು ಗ್ರಾಮಗಳಿಗೆ ಒದಗಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಯಗಚಿ ಏತ ನೀರಾವರಿ ಹಾಗೂ ಎತ್ತಿನಹೊಳೆ ಯೋಜನೆಗಳಿಗಾಗಿ ಈ ಭಾಗದ ಜನರು ಸಾಕಷ್ಟು ಜಮೀನು ಕಳೆದುಕೊಂಡಿದ್ದಾರೆ. ಆದರೆ, ಯೋಜನೆಗಳ ನೀರಿನ ಪ್ರಯೋಜನ ಮಾತ್ರ ಗ್ರಾಮಸ್ಥರಿಗೆ ದೊರೆಯುತ್ತಿಲ್ಲ. ಬರದ ಪರಿಸ್ಥಿತಿ ತೀವ್ರಗೊಂಡಿದ್ದು, ರೈತರು ಬೆಳೆದ ಬೆಳೆಗಳು ಒಣಗುತ್ತಿವೆ. ಜನರು ಹಾಗು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ ಎಂದು ಹೇಳಿದರು.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವುದರ ಜೊತೆಗೆ ಕೆರೆಕಟ್ಟೆಗಳನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು. ಸಮಸ್ಯೆ ಬಗೆಹರಿಸದಿದ್ದರೆ ಗ್ರಾಮಸ್ಥರು ಜನಜಾನುವಾರುಗಳೊಂದಿಗೆ ಕಾಲುವೆ ಬಳಿ ಧರಣಿ ನಡೆಸಿ ಉಪವಾಸ ಸತ್ಯಾಗ್ರಹ ಕೈಗೊಳ್ಳಬೇಕಾಗುತ್ತದೆ. ಮುಂದಿನ ಚುನಾವಣೆಯನ್ನು ಬಹಿಷ್ಕರಿಸುವ ಕುರಿತು ಕೂಡ ತೀರ್ಮಾನ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರಂಗಸ್ವಾಮಿ, ಅಣ್ಣಪ್ಪ, ದೊಡ್ಡತಿಮ್ಮಯ್ಯ, ರಾಜೇಶ್ ಶೆಟ್ಟಿ, ರುದ್ರಶೆಟ್ಟಿ, ದೇವರಾಜು, ತಿರುಮಲಯ್ಯ, ಶಿವಣ್ಣ ಶೆಟ್ರು, ಶಂಕರ ಶೆಟ್ರು, ತಮ್ಮಣ್ಣ, ನಾಗರಾಜು, ದೀಕ್ಷಿತ್ ಇತರರು ಭಾಗವಹಿಸಿದ್ದರು.

# ಚೇರಿಚೆನ್ನಳ್ಳಿಯಲ್ಲಿ ರಸ್ತೆ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ



**ಸಕಲೇಶಪುರ:** ಹೆತ್ತೂರು ಹೋಬಳಿಯ ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೇರಿಚೆನ್ನಳ್ಳಿ ಗ್ರಾಮದಲ್ಲಿ ಬಹುವರ್ಷಗಳಿಂದ ಬಾಕಿ ಇದ್ದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಚೇರಿಚೆನ್ನಳ್ಳಿ ಭಾಗದಲ್ಲಿ ರಸ್ತೆ ಹಾಗೂ ಸೇತುವೆ ನಿರ್ಮಾಣಕ್ಕೆ ಹಲವು ವರ್ಷಗಳಿಂದ ಬೇಡಿಕೆ ಇತ್ತು. ಗ್ರಾಮಸ್ಥರು ಹಾಗೂ ಸ್ಥಳೀಯ ಮುಖಂಡರು ರಸ್ತೆ ಅಭಿವೃದ್ಧಿಗೆ ಒತ್ತಾಯಿಸುತ್ತಿದ್ದರು. ಇದೀಗ ಕಾಮಗಾರಿಗೆ ಚಾಲನೆ ದೊರೆತಿದ್ದು, ಕಾಮಗಾರಿ ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕು ಎಂದು ಹೇಳಿದರು.

ರಸ್ತೆ ಅಭಿವೃದ್ಧಿಯಿಂದ ಗ್ರಾಮಸ್ಥರ ಸಂಚಾರದ ಜೊತೆಗೆ ರೈತರ ಕೃಷಿ ಚಟುವಟಿಕೆಗಳಿಗೆ ಹಾಗೂ ಸಕಲೇಶಪುರ ನಗರಕ್ಕೆ ಸಂಪರ್ಕ ಕಲ್ಪಿಸಲು ಅನುಕೂಲವಾಗಲಿದೆ. ಕಾಮಗಾರಿ ಪೂರ್ಣ ಗೊಂಡ ಬಳಿಕ ಈ ಭಾಗದ ಸಾರ್ವಜನಿಕರಿಗೆ ಸಂಚಾರ ಸೌಲಭ್ಯ ಸುಧಾರಿಸಲಿದೆ ಎಂದರು.

ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 9 ಕೋಟಿ ರೂ. ಅನುದಾನ ಒದಗಿಸಲಾಗುತ್ತಿದೆ. ರಸ್ತೆ, ಸೇತುವೆ ಸೇರಿ ಅಗತ್ಯ ಮೂಲ ಸೌಕರ್ಯ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.

ಗ್ರಾಮಸ್ಥರು ಮಾತನಾಡಿ, ಚೇರಿಚೆನ್ನಳ್ಳಿ ರಸ್ತೆ ಅಭಿವೃದ್ಧಿಗೆ ಹಲವು ವರ್ಷಗಳಿಂದ ಬೇಡಿಕೆ ಸಲ್ಲಿಸಲಾಗಿತ್ತು. ಇದೀಗ ಕಾಮಗಾರಿಗೆ ಚಾಲನೆ ದೊರೆತಿರುವುದರಿಂದ ಗ್ರಾಮಸ್ಥರಿಗೆ ಅನುಕೂಲ ವಾಗಲಿದೆ. ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸುಮಾರು 3.5 ಕೋಟಿ ರೂ. ಅನುದಾನ ದೊರೆತಿದ್ದು, ಈಗಾಗಲೇ ಒಂದು ರಸ್ತೆ ಕಾಮಗಾರಿ ನಡೆದಿದ್ದು, ಮತ್ತೊಂದು ರಸ್ತೆ ಕಾಮಗಾರಿಗೆ ಚಾಲನೆ ದೊರೆತಿದೆಂದು ತಿಳಿಸಿದರು.

ತಾಲ್ಲೂಕು ಬಿಜೆಪಿ ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ರಾಜೇಗೌಡ, ಶಕ್ತಿ ಕೇಂದ್ರದ ಅಧ್ಯಕ್ಷ ಗಿರೀಶ್, ಮುಖಂಡ ಲಕ್ಷ್ಮಣ್ ಗೌಡ ಇತರರು ಉಪಸ್ಥಿತರಿದ್ದರು.

# ಸೇವಾ ಮನೋಭಾವ ಮೈಗೂಡಿಸಿಕೊಳ್ಳಲು ಸಲಹೆ




• ಪ್ರಜೋದಯ ವರದಿ

**ಅರಕಲಗೂಡು:** ಶಿಕ್ಷಕರು ಪೂರ್ಣದೃಷ್ಟಿಯ ದಿಕ್ಸೂಚಿಯನ್ನು ಇಟ್ಟುಕೊಂಡು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಬೋಧನೆ ಮಾಡಿದ್ದೇ ಆದಲ್ಲಿ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡಿದಂತಹ ಹೆಮ್ಮೆ ನಿಮ್ಮದಾಗುತ್ತದೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ ಅವರು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಬುಧವಾರ ತಾಲ್ಲೂಕಿನ ರಾಮನಾಥಪುರ ಸ್ವಾಗತ್ ಕನ್ವೆನ್ಷನ್ ಹಾಲ್‌ನಲ್ಲಿ ತಾಲ್ಲೂಕು ಅನುದಾನರಹಿತ ಶಾಲೆಗಳ ಒಕ್ಕೂಟ ವತಿಯಿಂದ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಮಕ್ಕಳಿಗೆ ಶಿಕ್ಷಣ ಕಲಿಸುವ ಎಲ್ಲಾ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಶಿಕ್ಷಣ ಇಲಾಖೆಯ ಘನತೆಯನ್ನು ಹೆಚ್ಚಿಸುವ ಕಾರ್ಯವನ್ನು ಕೈಗೊಳ್ಳಬೇಕಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಮೊದಲ ಆದ್ಯತೆಯಾಗಿ ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಂಡರೇ ಗ್ರಾಮೀಣ ಭಾಗದ ಎಲ್ಲಾ ವರ್ಗಗಳ ಬಡ ಮಕ್ಕಳಿಗೆ ಅನುಕೂಲವಾಗಲಿದೆಂದು ಸಲಹೆ ನೀಡಿದರು.

ಕಳೆದ ಐದಾರು ವರ್ಷಗಳ ಹಿಂದೆ ಅರಕಲಗೂಡು ತಾಲ್ಲೂಕು ಎಸ್‌ಎಸ್‌ಎಲ್‌ಸಿ ಫಲಿತಾಂಶ ದಲ್ಲಿ ಕೊನೆಯ ಸ್ಥಾನವನ್ನು ಪಡೆದುಕೊಳ್ಳುತ್ತಿತ್ತು. ಕಳೆದ ಸಾಲಿನ ಫಲಿತಾಂಶದಲ್ಲಿ ಹಾಸನ ಜಿಲ್ಲೆಯಲ್ಲಿ 2ನೇ ಸ್ಥಾನಕ್ಕೆ ತಂದಿದ್ದೀರಿ. ಒಟ್ಟು 58 ಪ್ರೌಢಶಾಲೆಗಳ ಪೈಕಿ 51 ಶಾಲೆಗಳು ಶೇ.100 ರಷ್ಟು ಫಲಿತಾಂಶ ತಂದುಕೊಟ್ಟಿವೆ. ಅದರಲ್ಲಿ 11 ಖಾಸಗಿ ಶಾಲೆಗಳು ಸೇರಿವೆ. ಒಂದನೇ ಸ್ಥಾನ ಅತೀ ಸಮೀಪವಿದೆ. ಅದು ಈ ಸಾಲಿನಲ್ಲಿ ಸಹಕಾರಗೊಳ್ಳುವ ವಿಶ್ವಾಸ ನನ್ನಲಿದೆ ಎಂದರು.

ನಿವೃತ್ತ ಪ್ರಾಂಶುಪಾಲರಾದ ಡಾ.ಕವಿತಾ ಅವರು ಮಾತನಾಡಿ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ತುಂಬಾ ಜಟಿಲದಿಂದ ಕೂಡಿದ್ದು, ಅದಕ್ಕೆ ಶಿಕ್ಷಕರು ಮತ್ತು ಪೋಷಕರು ಸಂಸ್ಕಾರ ಶಿಸ್ತನ್ನು ರೂಢಿಸಿ ಕೊಂಡು ನಂತರ ಮಕ್ಕಳಿಗೆ ಕಲಿಸುವ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ತಮ್ಮನ್ನು ತಾವು ವಿಮರ್ಶಿಸಿಕೊಂಡು ನಂತರ ಮಕ್ಕಳಿಗೆ ಕಲಿಸಬೇಕಾದ ಅನಿವಾರ್ಯತೆ ಶಿಕ್ಷಕರ ಮುಂದಿದೆ ಎಂದು ಹೇಳಿದರು.

ನೈತಿಕ ಮತ್ತು ಮೌಲ್ಯಿಕ ಶಿಕ್ಷಣವನ್ನು ಬದಿಗೊತ್ತಿ ಶೇ.100 ಅಂಕಗಳ ಹಿಂದೆ ಬಿದ್ದಿರುವ ಪೋಷಕರು ಮತ್ತು ಮಕ್ಕಳ ಮನೋಭಾವದ ನಡುವೆ ಶಿಕ್ಷಕ ವೃತ್ತಿಯು ಸುಲಭವಾಗಿಲ್ಲ. ಗುರುಶಿಷ್ಯ ಪರಂಪರೆಯು ಬದಲಾಗಿರುವ ಈ ಸಂದರ್ಭದಲ್ಲಿ ಮಕ್ಕಳಿಗೆ ಪ್ರೀತಿಯ ಜೊತೆಗೆ ಕಲಿಸುವ ಅಗತ್ಯವಿದೆ. ಪೋಷಕರು ಅಗತ್ಯವಿಲ್ಲದ್ದನ್ನು ಮಕ್ಕಳಿಗೆ ಕೊಡಿಸಿ ನಂತರ ಪರಿತಪಿಸುವ ಬದಲು ಕೊರತೆಯ ನಡುವೆ ಜೀವನವನ್ನು ನಡೆಸುವ ಕಲೆಯನ್ನು ತಮ್ಮ ಮಕ್ಕಳಲ್ಲಿ ಮೈಗೂಡಿಸ ಬೇಕಿದೆ ಎಂದರು.

ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವರಾಮೇಗೌಡ ಮಾತನಾಡುತ್ತಾ ಖಾಸಗಿ ಶಿಕ್ಷಣ ಸಂಸ್ಥೆಗಳ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹರಿಸುವ ಜೊತೆಗೆ ಖಾಸಗಿ ಶಾಲಾ ಶಿಕ್ಷಕರಿಗೂ ಸರ್ಕಾರಿ ಶಾಲಾ ಶಿಕ್ಷಕರಿಗೆ ದೊರಕುವ ಪ್ರಶಸ್ತಿ ಮತ್ತು ಗೌರವಗಳನ್ನು ಸಿಗುವಂತೆ ಮಾಡವ ಕೆಲಸವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಯಶಸ್ವಿಯಾಗಿ ಮುನ್ನಡೆಸುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಸಮಾಜಕ್ಕೆ ಹೊಸದಿಕ್ಕನ್ನು ನೀಡುತ್ತಿವೆ ಎಂದರು.

ತಾಲ್ಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಉಪಾಧ್ಯಕ್ಷ ಗೋವಿಂದರಾಜು ಮಾತನಾಡಿ ದರು. ತಾಲ್ಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಸವರಾಜು, ಕಾರ್ಯದರ್ಶಿ ಸಾಕೀಬ್, ವಿವಿಧ ಖಾಸಗಿ ಶಾಲೆಗಳ ಮುಖ್ಯಸ್ಥರು, ಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಶಿಕ್ಷಕರು ಇಲ್ಲಿನ ಸುಬ್ರಮಣ್ಯಸ್ವಾಮಿ ದೇವಾಲಯದ ಬಳಿಯಿಂದ ಡಾ: ಸರ್ವಪಲ್ಲಿ ರಾಧಾಕೃಷ್ಣನ್‌ರ ಭಾವಚಿತ್ರದ ಬೆಳ್ಳಿರಥದ ಮೆರವಣಿಗೆಯನ್ನು ವೇದಿಕೆಯವರೆಗೆ ಕರೆತರಲಾಯಿತು. ಸಭಾ ಕಾರ್ಯಕ್ರಮದಲ್ಲಿ ಖಾಸಗಿ ವಿದ್ಯಾರ್ಥಿಗಳಿಗೆ ನಡೆಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿನ ವಿಜೇತರಿಗೆ ಮತ್ತು ಕ್ರೀಡಾಸ್ಪರ್ಧೆಗಳಲ್ಲಿ ವಿಜೇತರಾದ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು. ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಮತ್ತು 15 ಶಿಕ್ಷಕರನ್ನು ಗೌರವಿಸಲಾಯಿತು.

## ಬೇತಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳ ಸಾಧನೆ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರದ ಪಟ್ಟಾಭಿರಾಮ ಪ್ರೌಢ ಶಾಲಾ ಮೈದಾನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿದ್ದ 14 ವರ್ಷದೊಳಗಿನ ಮಕ್ಕಳ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ತಾಲ್ಲೂಕಿನ ಗುಬ್ಬಿ ಕ್ರಾಸ್‌ನ ಬೇತಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು ವಿವಿಧ ಕ್ರೀಡಾ ವಿಭಾಗಗಳಲ್ಲಿ ಸಾಧನೆ ಮಾಡಿದ್ದಾರೆ.

ಬಾಲಕರ ವಿಭಾಗದಲ್ಲಿ 600 ಮೀಟರ್ ಓಟದಲ್ಲಿ ಹೆಚ್.ಆರ್. ಯೋಹಾನ್ ಪ್ರಥಮ, 200 ಮೀಟರ್ ಓಟದಲ್ಲಿ ಡಿ.ಈ.ಆಯುಷ್ ಪ್ರಥಮ ಹಾಗೂ 400 ಮೀಟರ್ ಓಟದಲ್ಲಿ ಕರಣ್ ಪ್ರಥಮ ಸ್ಥಾನ ಪಡೆದಿದ್ದಾರೆ. 4×100ಮೀಟರ್ ರಿಲೇಯಲ್ಲಿ ಯೋಹಾನ್ ಮತ್ತು ತಂಡ ಪ್ರಥಮ ಸ್ಥಾನಗಳಿಸಿದ್ದು, ಚಕ್ರ ಎಸೆತ ಗೌತಮ್ ಆರ್ಯ ತೃತೀಯ ಸ್ಥಾನ ಪಡೆದಿದ್ದಾರೆ.

ಬಾಲಕಿಯರ ವಿಭಾಗದಲ್ಲಿ 600 ಮೀಟರ್ ಓಟದಲ್ಲಿ ಗ್ರೀಷ್ಮಾ ದ್ವಿತೀಯ, 400 ಮೀಟರ್ ಓಟದಲ್ಲಿ ಮಹಾಲಕ್ಷ್ಮಿ ಗೌಡ ತೃತೀಯ ಹಾಗೂ 200 ಮೀಟರ್ ಓಟದಲ್ಲಿ ಜಿ.ಎನ್.ರಿಷಾ ತೃತೀಯ ಸ್ಥಾನ ಪಡೆದಿದ್ದಾರೆ. 4×100 ಮೀಟರ್ ರಿಲೇಯಲ್ಲಿ ಶ್ರಾವ್ಯ ಮತ್ತು ತಂಡ ಪ್ರಥಮ ಸ್ಥಾನ ಪಡೆದು ಬಹುಮಾನ ಹಾಗೂ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕ್ರೀಡಾಕೂಟದಲ್ಲಿ ವಿವಿಧ ವಿಭಾಗಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶಾಲೆಯ ವ್ಯವಸ್ಥಾಪಕರಾದ ಸಂತೋಷ್‌ಕುಮಾರ್ ಅಭಿನಂದಿಸಿದರು. ವಿದ್ಯಾರ್ಥಿಗಳು ವೈಯಕ್ತಿಕ ಹಾಗೂ ತಂಡ ವಿಭಾಗಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿ ಶಾಲೆಯ ಕೀರ್ತಿ ಹೆಚ್ಚಿಸಿರುವುದು ಹೆಮ್ಮೆಯ ಸಂಗತಿ ಎಂದರು. ಶಾಲೆಯ ಪ್ರಾಂಶುಪಾಲರು, ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019